DEMAND NO. 61—LOANS TO GOVERNMENT SERVANTS AND MISCELLANEOUS LOANS

Madam/Sir, on the recommendation of the Governor, I beg to move:

"That a sum not exceeding Rs. 34,00,000 be granted 'on account' to the Government to defray the charges which will come in course of payment during the financial year ending 31st day of March 1975 in respect of "Loans to Government Servants and Miscellaneous Loans".

KARNATAKA AGRICULTURAL LANDS (PROHIBITION OF ALIENATION) (REPEATING) BILL 1974

INTRODUCTION

SRI M. MALLIKARJUNASWAMY (Minister for Education): On behalf of the Minister for Revenue, I beg to introduce the Karnataka Agricultural lands (Prohibition of Alienation) (Repeating) Bill, 1974.

MR. DEPUTY SPEAKER.—The Bill is introduced.*

MYSORE BETTING TAX AND RACE COURSES LICENSING (KARNATAKA AMENDMENT) BILL, 1974.

MOTION TO CONSIDER

SRI M. Y. GHORPADE (Minister for Finance).—I beg to move:

"That the Mysore Betting Tax and Race Courses Licensing (Karnataka Amendment) Bill, 1974 be taken into consideration.

---

*The Bill is amended as Annexure to this volume.

MR DEPUTY SPEAKER.—The Bill is moved.

"That the Mysore Betting Tax and Race Courses Licensing (Karnataka Amendment) Bill, 1974 be taken into consideration.

*SRI T. R. SHAMANNA.—I have given an amendment. This Bill has to go for eliciting public opinion as per rules.

MR. DEPUTY SPEAKER :—He may move it.

SRI T. R. SHAMANNA :—I beg to move :

"That the Mysore Betting Tax and Race Courese: Licensing Karnataka Amendment) Bill, 1974, be circulated for purpose of eliciting public opinion thereon before 30th April."

MR. DEPUTY SPEAKER .—Amendment moved :

"That the Mysore Betting Tax and Race Courses Licensing Karnataka Amendment) Bill, 1974, be circulated for purpose of eliciting public opinion before 30th April."

‡ SRI M. Y. GHORPADE :—Sir, The object of this Amendment Bill is to legalise betting. As members know, certain amoun' of illegal betting in bucket shops was taking place. It is to give a legal s a us to the off course Betting that an ordinance was passed permitting betting. And now the amendments are being placed before the Hon. members so that they may replace the Ordinance.

The object is to bring off-course betting within the four corners of the law. I may mention that there is a reciprocal arrangement with the Bombay Truf Club, whereby the citizen in Bangalore can bet in Bangalore at the Bangalore Race Course on Bambay Races and *vice*

versa. An ordinance was brought about on 29th November 1973 as betting started in Bangalore on Bombay Races as from 1st January

There are three things which require to be amended. The first is the Police Act. The second is the Race Courses Licensing Act. The third is the Betting Act. As members know, according to the Police Act, gambling is prohibited except racing. Now this act is being amended to include off-course betting in the Exemption. Similarly, the Race Courses Licensing Act is being suitably amended so that not only betting at Bsngalore but betting on some other Course may also be brought within the purview of this Bill. All these amendments are really meant to enable off-course betting.

I do not think it is necessary for me to make lengthy speech on this subject. The point is : large number of people who have been brought within the legal framework are given an opportunity to legally bet on some other race course with whom we may have reciprocal arrangements. As I have already stated, as a result of betting for about 15 days on Bombay races, we expect to collect a tax of Rs. 8 to 10 lakhs. I understand that the average attendance for this off-course betting is about 3,500 persons a day. In other words, about 3500 persons can take part in off-course betting in our Race Course. There is an arrangement between Bangalore and Bomby Turf Club whereby what is happening in Bombay is almost simultaneously relayed. We expect Rs. ½ lakh per day. In other words, if there are 30 days off-course betting. we will get about Rs. 15 lakhs. So the State Government will get by way of betting tax as much as Rs. 15 lakhs, which is not a small sum. The betting tax for purposes of off-course betting is 7½% of book bets and 10% on totes. It is the same as on winter racing. Today the State Government is getting about Rs. 2 crores of income from races Roughly Rs 140 lakhs from Summer Races, about Rs. 42 lakhs from Wintrs

(Sri M. Y. Ghorpade)

Races, Rs. 8 lakhs from off-course betting and Rs. 10 lakhs from Mysore Races. This is the broad picture. We get about Rs. 200 lakhs. It is estimated that the total amount spent on betting on all these items will be of the order of Rs. 11 crores; and as a result of Rs 11 crores betting, Government gets about Rs. 2 crores by way of betting tax and entertainment tax; and off-course betting is rpproximately a portion of this total income which is a significant amount because it can be of the order of Rs. 15 lakhs in a full year. I am once again repeating that once the principle of off-course betting is acceted, we feel that it is better to accept the betting legally instead of betting in illegal bucket shops and all sorts of things that will follows. We have introduced this idea with this intention and the idea has worked satisfactorily and both the Bombay Turf Club and our Race Course here are satisfied with the arrangment. So, we intend to replace the ordinance by suitable amendments in the law.

SRI T. R. SHAMANNA :—I want a clarification. It is stated in the Financial Memorandum attached to the Bill that no additional expenditure is likely to be involved as a result of the Bill being enacted into law. I went to know what is the machinery by which collection will be made and how will the Government have a check over the betting which takes place illegally.

As far as I know, the betting takes at our Race Club. So bets are accepted at our Race Club. And when bets are accepted, the betting tax, as I said already, Rs. 7½ lakhs--10 per cent, it is easy to collect. It does not require additional machinery. It betting tax is allowed on summer races and winter races, by adding one more item, it does not require any additional staff.

If the Hon. Member tells what particular difficulty he has, then I will have that matter looked into.

4-00 P.M.

‡ಶ್ರೀ ಕೆ. ಎಂ. ನಾಗಣ್ಣ : ಮಾನ್ಯ ಉಪಾಧ್ಯಕ್ಷರೇ, ರೇಸ್ ಬಗ್ಗೆ ಮಾನ್ಯ ಅರ್ಥ ಮಂತ್ರಿಗಳಿಗೆ ವಿಚಾರ ಸರಿಯಾಗಿ ಇನ್ನೂ ಗೊತ್ತಿಲ್ಲ. ಅವರೂ ಸಹ ನನಗೆ ಗೊತ್ತಿಲ್ಲ ಎಂದು ಹಿಂದೆ ಹೇಳಿದ್ದಾರೆ. ಆದ್ದರಿಂದ ಆವರನ್ನು ಜಾಸ್ತಿ ಒತ್ತಾಯ ಮಾಡುವುದು ತಪ್ಪಾಗುತ್ತದೆ. ಅವರಿಗೆ ಎಷ್ಟೋ ವಿಚಾರಗಳು ಗೊತ್ತಿಲ್ಲ, ಅವರಿಗೆ ಇದರಲ್ಲಿ ಸರಿಯಾಗಿ ಅನುಭವ ಇಲ್ಲ. ಆವರು ಒಂದೆರಡ ಸಲ ಹೋಗಿ ಕುಳಿತುಕೊಂಡು ಕುದುರೆಗಳನ್ನ ನೋಡಿ ಅನುಭವ ಪಡೆದವರಲ್ಲ.

ಶ್ರೀ ಎಂ. ವೈ. ಘೋರ್ಪಡೆ : ನನಗೆ ಕುದುರೆಗಳ ಅನುಭವ ಹೆಚ್ಚಾಗಿಲ್ಲ ದಿದ್ದರೂ ರೇಸಿನ ಲೆಕ್ಕ ಗೊತ್ತಿದೆ.

ಶ್ರೀ ಕೆ. ಎಂ. ನಾಗಣ್ಣ : ಆದರ ಆಕೌಂಟ್ಸ್ ಬಿ. ಕಾಂ. ಪಾಸ್ ಮಾಡಿ ದವನಿಗೂ ಗೊತ್ತಿರುತ್ತದೆ. ಆದುದರಿಂದ ಈ ರೇಸಿನ ಬಗ್ಗೆ ಸ್ವಲ್ಪ ವಿಶದವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ರೇಸ್ ಆನ್ನುವುದು ಸ್ವಾತಂತ್ರ್ಯ ಬರುವುದಕ್ಕೆ ಮುನ್ನ ಬ್ರಿಟಿಷರ ಕಾಲದಿಂದಲೂ ನಡೆದುಕೊಂಡು ಬರುತ್ತಿದೆ. ಈಗ ರೇಸ್ ಕುದುರೆಗಳ ಮೂಲೀಕರು ಯಾರು ಇದ್ದಾರೋ ಅವರುಗಳು ಬಾಂಬೆಯಲ್ಲಿ ಆಡುತ್ತಿದ್ದರು. ಹಿಂದಿನ ಕಾಲದಲ್ಲಿ E. D. Season—Elber Sasoon, Mill owners—*R*aja of Kollahpur, Raja of Bhavanagar—Raja of Jamnagar, *R*aja of Mysore, *R*aja of Gwaliar ಇವರುಗಳು ಇದನ್ನು ನಡೆಸುತ್ತಾ ಇದ್ದರು. ಇದರ ಜೊತೆಗೆ ಜಮೀನ್ದಾರರು, ನವಾಬರೂ ಸಹ ಇದು ಒಂದು ಹಾಬಿ ಆಟ ಅಂದುಕೊಂಡು ಆಟ ಆಡುತ್ತಾ ಇದ್ದರು.

ಹಿಂದೆ ನಮ್ಮ ಬೆಂಗಳೂರಿನಲ್ಲಿ ಮೇಕ್ರಿ ಸರ್ಕಲ್‌ನ ಹತ್ತಿರ ಇರುವ ಜಾಗದಲ್ಲಿ ಈಗ ಇರುವ ಮಹಾರಾಜರ ತಂದೆ ಯುವರಾಜರ ಕಾಲದಲ್ಲಿ ಕುದುರೆಗಳ ಮೇಲೆ ಪೋಲೋ ಆಟ ಆಡುತ್ತಿದ್ದರು. ಆಂಥಾದು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಏನಾಯಿತು ಎಂದರೆ ಮದ್ರಾಸಿನಲ್ಲಿ ಈ ಆಟ ಅಡುವುದಕ್ಕೆ ಶುರು ವಾಯಿತು. ಆವಾಗ ಮದ್ರಾಸ್ ಸರ್ಕಾರ ಆದನ್ನು ಊಟಿಗೆ ಟ್ರಾನ್ಸ್‌ಫರ್ ಮಾಡಿದರು. ಏತಕ್ಕೆಂದರೆ ಬೇಸಿಗೆಯಲ್ಲಿ ಮದ್ರಾಸ್ ಸೆಕೆಚೇರಿಯೇಟ್ ಊಟಿಯಲ್ಲಿ ಕೆಲಸ ಮಾಡುತ್ತಿದ್ದುದರಿಂದ ಆರೀತಿ ಮಾಡಿದರು. ಊಟಿಯಲ್ಲಿ ಒಂದು ಸಣ್ಣ ಮೈದಾನ ಮಾಡಿಕೊಂಡು ಈ ರೇಸ್ ನಡೆಸುತ್ತಾ ಇದ್ದರು. ಈಗ ದಿ ಮೈಸೂರು ಬೆಟ್ಟಿಂಗ್ ಟ್ಯಾಕ್ಸ್ ಅಂಡ್ ರೇಸ್ ಕೋರ್ಸನ್ನು ಲೈಸನ್ಸಿಂಗ್ (ಕರ್ನಾಟಕ ಅಮೆಂಡ್‌ಮೆಂಟ್)ಬಿಲ್, 1974 ಇದಕ್ಕೆ ರಾಜ್ಯಪಾಲರು ಏನು ಒಂದು ಆರ್ಡಿನೆನ್ಸ್ ಹೊರಡಿಸಿದ್ದಾರೋ, ಬಾಂಬೆಯಲ್ಲಿ ರೇಸ್ ಇದ್ದರೆ ಬೆಂಗಳೂರಿನಲ್ಲಿ

(ಶ್ರೀ ಕೆ. ಎಂ. ನಾಗಣ್ಣ)

ಬೆಟ್ಟಿಂಗ್ ತೆಗದುಕೊಳ್ಳಬಹುದು ಎಂದು ಮಾಡಿದ್ದೀರಿ. ಇದರ ಪ್ರಕಾರ ಈವಾಗ ಇದಕ್ಕೆ ಎಂಟ್ರೆನ್ಸ್ ಫೀಸ್ ಎರಡು ರೂಪಾಯಿ ಮಾಡಿದ್ದೀರಿ. ಮೊದಲು ಸಮ್ಮರ್‌ನಲ್ಲಿ ಒಂದು ಬೆಟ್ಟಿಂಗ್ ಮಾಡಬೇಕಾದರೆ ಮಿನಿಮಮ್ 50 ರೂಪಾಯಿ ಕೊಡಬೇಕಾಗಿತ್ತು. ಈಗ ಏನು ಮಾಡಿದ್ದೀರಿ ಎಂದರೆ ಆವರು 2 ರೂಪಾಯಿ ಕೊಟ್ಟರೆ 10 ರೂಪಾಯಿ ಬೆಟ್ಟಿಂಗ್ ತೆಗೆದುಕೊಳ್ಳುತ್ತಾನೆ. ಇದರಿಂದ ಈ ಕ್ಲಬ್ ನವರಿಗೆ ಬುಕ್‌ಮೇಕರ್ಸ್‌ನವರಿಂದಲೂ ಲಾಭ ಬರುತ್ತದೆ ಮತ್ತು ಬುಕ್‌ಬೆಟ್ಸ್ ನವರಿಂದಲೂ ಕಮೀಷನ್ ಬರುತ್ತದೆ. ಇದನ್ನು ತೆಗೆದುಕೊಳ್ಳುವವರು ಯಾರು ಎಂದರೆ ಬಡ ಜನಗಳು, ಕೂಲಿಗಾರರು ಮತ್ತು ಕಾರ್ಪೊರೇಷನ್ ಅಧಿಕಾರಿಗಳು. ಈ ರೀತಿ ಎಲ್ಲರೂ ಈ ರೇಸಿನಲ್ಲಿ ಸೇರುವುದರಿಂದ ಈ ಬಡ ಜನಗಳು ದುಡ್ಡು ರೇಸ್‌ಕೋರ್ಸ್‌ಗೆ ಹೋಗುತ್ತದೆ. ಇದರಿಂದ 10-12 ಲಕ್ಷ ರೂಪಾಯಿ ಆದಾಯ ಬರುತ್ತದೆ ಎಂದು ಹೇಳಿದರು. ಈ ರೇಸಿನ ಬಗ್ಗೆ ಒಂದು ಉದಾಹರಣೆ ಹೇಳುವುದಾದರೆ ಕೊಲೊಂಬೋದಲ್ಲಿ ಮೊದಲು ಸ್ವಾತಂತ್ರ್ಯ ಬರುವ ಮುನ್ನ 52 ವಾರಕ್ಕೆ 52 ರೇಸುಗಳು ನಡೆಯುತ್ತಾ ಇತ್ತು. ಸ್ವಾತಂತ್ರ್ಯ ಬಂದ ಮೇಲೆ ಸಿಲೋನ್ ಜನ ರೇಸ್ ಬೇಕಾಗಿಲ್ಲ ಎಂದು ಹೇಳಿದ ಮೇಲೆ ಸಿಲೋನ್ ಸರ್ಕಾರ ಆ ರೇಸನ್ನು ಅಬಾಲಿಷ್ ಮಾಡಿದರು. ಆದರೆ ಬೆಂಗಳೂರಿನಲ್ಲಿ ಮೊದಲು ಯಾವ ರೀತಿ ಇತ್ತು ಎನ್ನುವುದನ್ನು ಹೇಳುತ್ತೇನೆ. ನಾವು ಹುಡುಗರಾಗಿದ್ದಾಗ ನೋಡಿದ್ದು 1922ನೇ ಇಸವಿಯಲ್ಲಿ ಸಮ್ಮರ್‌ನಲ್ಲಿ 12 ಆಥವಾ 16 ಮೀಟ್ ಆಗುತ್ತಿತ್ತು. ಅದಲ್ಲದೆ ಜಟಕಾ ಗಾಡಿ ರೇಸ್ ಎಂದು ಪೋನಿರೇಸ್ ಮಾಡಿಕೊಳ್ಳುತ್ತಿದ್ದರು. ಈಚೆಗೆ ಬೆಂಗಳೂರಿನಲ್ಲಿ ಆ ಸಮ್ಮರ್ ಮೀಟ್ 30 ಆಗುತ್ತಿದೆ. ಇದರಿಂದ 1 ಕೋಟಿ 42 ಲಕ್ಷ ರೂಪಾಯಿ ಏನು ಬರುತ್ತದೆ ಅದು ಸರ್ಕಾರದ ಖಜಾನೆಗೆ ಬರುತ್ತದೆ. ಇನ್ನು ಇದರ ಜೊತೆಗೆ ವಿಂಟರ್ ರೇಸ್‌ಗೆ ಪರ್ಮಿಷನ್ ಕೊಟ್ಟಿದ್ದೀರಿ. ಈ ಸದನದಲ್ಲಿ ನಾವು ಹೋದ ಸಾರಿಯೇ ಹೇಳಿದೆ, ಈ ಬಗ್ಗೆ ಪರ್ಮಿಷನ್ ಕೊಡಕೂಡದು ಎಂದು ಹೇಳಿದಾದ ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಈ ಬಗ್ಗೆ ಒಂದು ಹೇಳಿಕೆ ಕೊಟ್ಟರು ಎನ್ನುವ ಜ್ಞಾಪಕ ನನಗೆ ಇದೆ. ಅದರೂ ಕೂಡ ನೀವು ಒಳಿಗೊಂದಳಗೇ ಕ್ಯಾಬಿನೆಟ್ ಮೀಟಿಂಗ್ ಸೇರಿ ಈ ವಿಂಟರ್ ಸೀಸನ್‌ಗೆ ಪರ್ಮಿಷನ್ ಕೊಡಲು ತೀರ್ಮಾನ ತೆಗೆದುಕೊಂಡರು ಎಂದು ನಾನು ಕೇಳಿದೆ. ಈಗ 29 ದಿವಸ ಸಮ್ಮರ್‌ನಲ್ಲಿ ಮೀಟ್ ಮಾಡುವುದಲ್ಲದೆ 30 ದಿವಸ ವಿಂಟರ್‌ನಲ್ಲಿ ಮೀಟ್ ಆಗುತ್ತದೆ. ಇದಲ್ಲದೆ ಬೊಂಬಾಯಿನಲ್ಲಿ ರೇಸ್ ನಡೆದರೆ ಅದಕ್ಕೂ ಬೆಂಗಳೂರಿನಲ್ಲಿ ಬೆಟ್ಟಿಂಗ್ ತೆಗೆದುಕೊಳ್ಳುತ್ತೀರಿ. ಅದೂ 30 ದಿವಸ ಸೇರಿಸಿಕೊಂಡರೆ ಒಟ್ಟು 89 ದಿವಸವಾಯಿತು. ಈ ಬಗ್ಗೆ ಹೇಳುವುದಾದರೆ ಬಾಂಬೆಯಲ್ಲಿ ರೇಸ್ ಆಡುವ ಜನ ಬಹಳ ಶ್ರೀಮಂತರಿದ್ದಾರೆ. ಅನೇಕ ಜನ ಬ್ಲಾಕ್ ಮಾರ್ಕೆಟೀರ್ಸ್ ಹತ್ತಿರ ಹಣ ಇದೆ. ಅದರಂತೆ ಇಲ್ಲೂ ಆಗಬೇಕು

ಎಂದರೆ ಅದು ಸರಿಯೇ ? ಮೊದಲು ವಿಂಟರ್ ರೇಸನ್ ಕಲ್ಕತ್ತಾ, ಮದ್ರಾಸ್, ಬೊಂಬಾಯಿನಲ್ಲಿ ಆಗುತ್ತಿತ್ತು. ಈಗ ಬೆಂಗಳೂರಿನಲ್ಲಿ ಇರುವುದರಿಂದ ಇಲ್ಲಿಗೆ ಯಾರು ಬರುತ್ತಾರೆ ಎಂದರೆ ಬೆಂಗಳೂರು ಸಿಟಿಯಲ್ಲಿರತಕ್ಕ ಜನ ಮಾತ್ರ ಬರಬಹುದು, ಬೇರೆ ಇನ್ನು ಯಾರೂ ಅಕ್ಕಪಕ್ಕದ ಜನ ಬರುವುದಿಲ್ಲ ಆದುದರಿಂದ, ಈ ಕರ್ನಾಟಕ ಜನರ ರಕ್ತವನ್ನು ಹೀರುವುದಕ್ಕೆ ಈ ವಿಂಟರ್ ಸೀಸನ್ ರೇಸ್ 30 ದಿವಸ ಆಡುವುದರ ಜೊತೆಗೆ ಇನ್ನೂ 30 ದಿವಸ ಬಾಂಬೆ ಆಡತಕ್ಕಂಥ ವಿಂಟರ್ ರೇಸ್‌ಗೂ ಬೆಟ್ಟಿಂಗ್ ಇಲ್ಲೇ ತೆಗೆದುಕೊಳ್ಳುವುದಕ್ಕೆ ಏತಕ್ಕೆ ತೀರ್ಮಾನ ತೆಗೆದು ಕೊಳ್ಳಬೇಕಾಗಿತ್ತು, ಏತಕ್ಕೆ ಅದಕ್ಕೆ ಪರ್ಮಿಷನ್ ಕೊಡಬೇಕಾಗಿತ್ತು ? ಈಗ ಸಮ್ಮರ್ ರೇಸ್ ಆಡುವುದನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಒಟ್ಟು 89 ರೇಸ್ ಆಗುತ್ತದೆ. ಅಲ್ಲಗೆ ಒಂದು ವರ್ಷಕ್ಕೆ ಅಂದರೆ 52 ವಾರಕ್ಕೆ 89 ರೇಸನ್ ಆಗುತ್ತವೆ. ಅದರಲ್ಲಿ 18 ರೇಸುಗಳು ಮೈಸೂರಿನಲ್ಲಿ ನಡೆಯುತ್ತವೆ. ಉಳಿದದ್ದು ಇಲ್ಲಿ ನಡೆಯುತ್ತದೆ. ಇದರ ಒಟ್ಟು ಲೆಕ್ಕಾಚಾರ ತೆಗೆದುಕೊಂಡರೆ ಒಂದು ವಾರಕ್ಕೆ ಎರಡೂವರೆ ರೇಸು ಆಗುತ್ತದೆ. ಯಾವಾಗಲೂ ಹೆಂಡವನ್ನು ಕುಡಿಯುವ ಜನಗಳಿಗೆ ಅಮಲು ಹೇಗೆ ಇರುತ್ತದೋ ಅದೇ ರೀತಿ ಜೂಜು ಆಡುವ ಜನರಿಗೆ ಈ ಅಮಲು ಬರುತ್ತದೆ. ಅಲ್ಲಗೆ ಒಂದು ವಾರಕ್ಕೆ ಎರಡೂವರೆ ರೇಸು ಇಟ್ಟರೆ, ಒಂದು ರೇಸ್‌ಗೆ ಸಮಯ 3 ದಿವಸ ಬೇಕಾಗುತ್ತದೆ ಅಲ್ಲಗೆ ಒಂದು ವಾರವೆಲ್ಲಾ ಈ ರೇಸ್‌ಗೆ ಸಮಯ ಕಳೆಯಬೇಕಾಗುತ್ತದೆ ಆದುದರಿಂದ ನಮ್ಮ ಸರ್ಕಾರದವರು ಈ ಬಗ್ಗೆ ಎಷ್ಟರಮಟ್ಟಿಗೆ ಉಪಕಾರ ಮಾಡಿಕೊಟ್ಟಿದ್ದಾರೆ ಅನ್ನು ನೋಡಿ. ಅದೂ ಅಲ್ಲದೆ ನಾನು ಇನ್ನೊಂದು ವಿಚಾರ ಕೇಳಿದೆ ಅದೇನೆಂದರೆ ನಮ್ಮ ಸರ್ಕಾರದ ಖಜಾನೆಯಲ್ಲಿ ಹಣ ಇಲ್ಲದೆ ಈ ಟರ್ಫ್ ಕ್ಲಬ್‌ನವರಿಂದ 25 ಲಕ್ಷ ರೂಪಾಯಿ ಹಣವನ್ನು ಅಡ್ವಾನ್ಸ್ ಆಗಿ ತೆಗೆದುಕೊಂಡಿದ್ದಾರೆ ಎಂದು ಕೇಳಿದೆ. ಈ ಸಮಾಚಾರ ಗಾಳಿ ವರ್ತಮಾನದಿಂದ ಬಂದಿದೆ. ನನಗೆ ಇನ್ನೂ ಅದರ ಅನ್ಯೋಯಲ್ ರಿಪೋರ್ಟ್ ಬಂದಿಲ್ಲ. ಅದು ಬಂದಾಗ ನೋಡುತ್ತೇನೆ. ಇದನ್ನು ಮಾನ್ಯ ಅರ್ಥ ಸಚಿವರ ಗಮನಕ್ಕೆ ಸುಮ್ಮನೆ ತಂದಿದ್ದೇನೆ. 25 ಲಕ್ಷ ರೂಪಾಯಿ ಹಣವನ್ನು ಅವರಿಂದ ಅಡ್ವಾನ್ಸ್ ಆಗಿ ತೆಗೆದುಕೊಂಡು ಬಂದು ನೌಕರರ ಸಂಬಳ ಸಾರಿಗೆಗಳನ್ನು ಹಂಚಿದ್ದಾರೆ ಎಂದು. ಇದರಲ್ಲಿ ಸುಳ್ಳು ಇದ್ದರೆ ನಾನು ಒಪ್ಪಿಕೊಳ್ಳುತ್ತೇನೆ.

ಇನ್ನು ಆಫ್-ಕೋರ್ಸ್ ಬೆಟ್ಟಿಂಗ್ ಬಗ್ಗೆ ಏನು ಒಂದು ಮಸೂದೆ ತಂದಿದ್ದಾರೆ ಹೊರಗಡೆ ನಡೆಯತಕ್ಕಂಥ ರೇಸ್‌ಗೆ ಇಲ್ಲಿ ಬೆಟ್ಟಿಂಗ್ ತೆಗೆದುಕೊಂಡರೆ ಇಲ್ಲೀಗಲ್ ಬೆಟ್ಟಿಂಗ್ ನಿಲ್ಲಿಸಬಹುದು ಎಂದು ಏನು ಇದೆ ಅದು ಕೊಟ್ಟಿರುವ ಕಾರಣ ಸರಿಯಲ್ಲ ಎಂದು ಹೇಳುತ್ತೇನೆ. ಏತಕ್ಕೆಂದರೆ ಈಗ ನಮ್ಮ ರಾಜ್ಯದಲ್ಲಿ ಇಲ್ಲಿಸಿಟ್ ಡ್ರಿಂಕನ್ನು ಹೇಗೆ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲವೋ ಅದೇ ರೀತಿ ಇಲ್ಲೀಗಲ್ ಬೆಟ್ಟಿಂಗ್‌ನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಜನ ತಾವಾಗೇ ತಿಳಿದುಕೊಳ್ಳುವ

(ಶ್ರೀ ಕೆ. ಎಂ. ನಾಗಣ್ಣ)

ವರೆಗೂ ಮಾನ್ಯ ಫೋರ್ಪಡೆಯವರಾಗಲೀ, ಮಾನ್ಯ ದೇವರಾಜ ಅರಸ್ ರವರಾಗಲೀ ಯಾರೂ ನಿಲ್ಲಿಸುವುದಕ್ಕಾಗುವುದಿಲ್ಲ. ಯಾವ ರೀತಿಯಾಗಿ ಜನರಿಗೆ ಕುಡಿತವನ್ನು ತಪ್ಪಿಸುವುದಕ್ಕೆ ಆಗುವುದಿಲ್ಲವೋ, ಇಲ್ಲಸಿಟ್ ಡ್ರಿಂಕ್‌ನ್ನು ಹೇಗೆ ನಿಲ್ಲಿಸುವುದಕ್ಕಾಗುವುದಿಲ್ಲವೋ ಅದೇ ರೀತಿ ಈ ಬೆಟ್ಟಿಂಗ್‌ನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಅದೇ ರೀತಿ ನಡೆಯುತ್ತದೆ ಎಂದು ಹೇಳುತ್ತೇನೆ.

ನೂರಾರು ಜನರು ಇಲ್ಲೀಗಲ್ ಬೆಟ್ಟಿಂಗನ್ನು ಈಗಲೂ ನಡೆಸುತ್ತಿದ್ದಾರೆ. ಅದನ್ನು ತಡೆಗಟ್ಟುವುದಕ್ಕೆ ಇಲ್ಲಿ ಯಾರಿಂದಲೂ ಸಾಧ್ಯವಿಲ್ಲ. ಅಂತೂ ಇಲ್ಲೀಗಲ್ ಬೆಟ್ಟಿಂಗ್ ಕೂಡ ರೆಗ್ಯುಲರ್ ಬೆಟ್ಟಿಂಗ್‌ನಂತೆಯೇ ನಡೆಯುತ್ತಿದೆ.

ಇನ್ನು ಈ ಮಸೂದೆಯಲ್ಲಿ ರಾಜ್ಯದ ವರಮಾನವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಇದನ್ನು ತರಲಾಗಿದೆ ಎಂದು ಹೇಳಿದ್ದಾರೆ. ಇನ್ನೂ ನೆನ್ನೆ ತಾನೆ ಅರ್ಥ ಸಚಿವರು ರಾಜ್ಯದ ಬಡಜನರ ಬೆನ್ನೆಲುಬುಗಳು ಮುರಿಯುವಂತೆ ತೆರಿಗೆ ಹೊರೆ ಅವರ ಬೆನ್ನು ಮೇಲೇರಿದ್ದರೂ ಅದು ಇನ್ನೂ ಸಾಲದೆಂದು ಅವರನ್ನು ನೆಲಕ್ಕೆ ತುಳಿದು ಅವರ ರಕ್ತವನ್ನು ಕುಡಿಯಲು ಇಂಥ ಮೇಜರ್ಸ್ ತರುವುದಕ್ಕೆ ಸರ್ಕಾರದವರಿಗೆ ಅಂದರೆ ಈ ಮಂತ್ರಿಗಳಿಗೆ ಹೃದಯವಿಲ್ಲವೇ? ಇವರಿಗೂ ಹೆಂಡತಿ ಮಕ್ಕಳಿಲ್ಲವೆ?

ಶ್ರೀ ಎಂ. ವೈ. ಘೋರ್ಪಡೆ.—ನಾನು ರೇಸಾಡುವುದಿಲ್ಲ. ನಾನು ರೇಸಿಗೂ ಹೋಗುವುದಿಲ್ಲ. ಇದನ್ನು ತಂದಿರುವುದು ಶ್ರೀಮಾನ್ ನಾಗಣ್ಣನಂಥವರಿಗಾಗಿ—

ಶ್ರೀ ಕೆ. ಎಂ. ನಾಗಣ್ಣ.—ನಾನೂ ಸಹಾ ಲಕ್ಷಾಂತರ ರೂಪಾಯಿಗಳನ್ನು ಹಾಳು ಮಾಡಿಕೊಂಡ ಮೇಲೆ ಇದನ್ನು ಈಗ ಬಿಟ್ಟಿದ್ದೇನೆ. ಈಗ ಈ ರೇಸಿಗೆ ಶ್ರೀಮಂತರುಗಳ್ಯಾರು ಬರುವುದಿಲ್ಲ. ಅಲ್ಲಿಗೆ ಬರತಕ್ಕ ಜನರಲ್ಲಿ ಮುಕ್ಕಾಲು ಭಾಗದ ಜನರೇನಿದ್ದಾರೆ ಅವರೆಲ್ಲಾ ಬಡವರೇ. ಆದುದರಿಂದ ಆ ಬಡವರನ್ನು ಬದುಕಿಸಿ ಎಂದು ಕೇಳುತ್ತಿದ್ದೇನೆ.

ಇನ್ನು ಈ ಮಸೂದೆಯಲ್ಲಿ ಇಲ್ಲೀಗಲ್ ಬೆಟ್ಟಿಂಗನ್ನು ತಪ್ಪಿಸುವುದಕ್ಕಾಗಿಯೂ ಮತ್ತು ರೇಸ್‌ಕ್ಲಬ್ಬಿನ ಹಿತದೃಷ್ಟಿಯಿಂದಲೂ ಇದನ್ನು ತರಲಾಗಿದೆ ಎಂದು ಹೇಳಿದ್ದಾರೆ. ಇಲ್ಲಿ ಇವರೇಕೆ ಹೀಗೆ ಹೇಳಿದ್ದಾರೆ? ಮಾನ್ಯ ಘೋರ್ಪಡೆಯವರು ತಾವು ರೇಸಿಗೆ ಹೋಗುವುದಿಲ್ಲ ಎಂದು ಹೇಳಿದ ಮೇಲೆ ಇವರಿಗೆ ಆ ರೇಸ್ ಕ್ಲಬಿನ ಮೇಲೆ ಏತಕ್ಕೆ ಇಷ್ಟೊಂದು ಅಭಿಮಾನ? ಇನ್ನೂ ರೇಸಾಡತಕ್ಕಂಥ ನನಗೆ

ಅದರ ಬಗ್ಗೆ ಅಭಿಮಾನವಿರಬೇಕು. ಸರ್ಕಾರದವರಿಗೇನಿದ್ದರೂ ಬಂಡಷ್ಟು ಕಿತ್ತುಕೊಳ್ಳುವುದೇ ಅವರ ಉದ್ದೇಶವಾಗಿರುವಾಗ, ಅದನ್ನು ಇಲ್ಲಿ ಹೇಳಬಾರದಾಗಿತ್ತು. ಅದೂ ಸಹಾ ಇವರಿಗೆ ಹೊಳೆಯದೆ ಆ ಮಾತನ್ನೂ ಕೂಡ ಈ ಮಸೂದೆಯಲ್ಲಿ ಹಾಕಿದ್ದಾರೆ. ಆದುದರಿಂದ ರೇಸ್ ಕ್ಲಬ್ಬಿನ ಹಿತದೃಷ್ಟಿಯಿಂದ ಎಂಬ ಪದ ಇಲ್ಲಿ ಅರ್ಥವಿಲ್ಲದ್ದು ಎಂದು ಹೇಳುತ್ತೇನೆ. ಬಿಲ್ಲಿನಲ್ಲಿ ಇಂಥ ಪದಗಳಿರುವುದು ಸಾಧುವಾದ್ದಲ್ಲ.

ಇನ್ನು ಇದರಲ್ಲಿ ಎಂಪ್ಲಾಯಿಮೆಂಟ್ ದೃಷ್ಟಿಯಿಂದಲೂ ಇದನ್ನು ತರಲಾಗಿದೆ ಎಂದು ಹೇಳಿದ್ದಾರೆ. ಅಲ್ಲಿ ಕೆಲವು ಉನ್ನತ ದರ್ಜೆ ಅಧಿಕಾರಿಗಳಿದ್ದಾರೆ, ಅವರನ್ನು ಬಿಟ್ಟರೆ ಇನ್ನುಳಿದವರೆಲ್ಲ ಹೋಲದಲ್ಲಿ ಕೆಲಸ ಮಾಡತಕ್ಕ ಕೂಲಿಯವರಿದ್ದ ಹಾಗೆ. ವಿಂಟರ್ ರೇಸಿನಲ್ಲಿ ಅಲ್ಲಿ ಯಾರಿಗೂ ನೌಕರಿಗಳು ದೊರೆಯುವುದಿಲ್ಲ. ಇನ್ನು ಬೇಸಿಗೆ ಕಾಲದ ರೇಸಿನಲ್ಲಿ ವಾರಕ್ಕೆ ಎರಡು ದಿನಗಳು ಕೆಲವರಿಗೆ 8 ಗಂಟೆಗಳ ಕಾಲದಲ್ಲಿ ದುಡಿಸಿಕೊಂಡು ಅವರಿಗೆ ಕೇವಲ 12 ರೂಪಾಯಿಗಳನ್ನು ಕೊಡುತ್ತಾರೆ. ಇದು ಸದಾ ಕಾಲದಲ್ಲೂ ಕೆಲಸ ಮಾಡತಕ್ಕ ಸಂಸ್ಥೆಯಲ್ಲ. ಇಷ್ಟಾದರೆ ಇಲ್ಲಿ ನಮ್ಮ ನಿರುದ್ಯೋಗ ಸಮಸ್ಯೆ ಪರಿಹಾರವಾದಂತಾಯಿತೆ? ಅಲ್ಲಿ ಕೆಲಸಕ್ಕೆ ಬರತಕ್ಕ ಹೆಣ್ಣು ಮಕ್ಕಳು ಬಳಿ ಸೀರೆ ಬಿಳಿ ರವಕಗಳನ್ನೇ ಹಾಕಿಕೊಂಡು ಬರಬೇಕೆಂದು ಕಾನೂನು ಮಾಡಿದ್ದಾರೆ. ಗಂಡಸರದೂ ಕೂಡ ಇದೇ ರೀತಿ ಉಡುಪನ್ನು ನಿರ್ಧಾರ ಮಾಡಿದ್ದಾರೆ. ಈ ಬಟ್ಟೆಗಳನ್ನು ಹಾಕಿಕೊಂಡು ಬರದಿದ್ದರೆ ಅವರದ್ನು ಒಳಕ್ಕೇ ಬಿಡುವುದಿಲ್ಲ. ಇನ್ನು ಇಲ್ಲಿ ಅದರ್ ಆಕ್ಟಿವಿಟೀಸ್ ಎಂದಿದ್ದಾರೆ. ಆದೇನೋ ನನಗೆ ತಿಳಿಯಲಿಲ್ಲ. ಅಲ್ಲಿ ರೇಸುಗಳು ನಡೆಯತಕ್ಕ ಕಾಲದಲ್ಲಿ ಹೊರಗಡೆ ಕಡಲೇಕಾಯಿ- ಜೋಳವನ್ನು ಮಾರಾಟ ಮಾಡುತ್ತಿರುತ್ತಾರೆ. ಅದನ್ನೇ ಇವರು ಅದರ್ ಆಕ್ಟಿವಿಟೀಸ್ ಎಂದು ಹೇಳಿದ್ದಾರೇನೋ ತಿಳಿಯದು.

ಇನ್ನು ನಮ್ಮ ಸರ್ಕಾರದವರು ಜೂಜಿನ ಕುದುರೆಗಳ ಬ್ರೀಡನ್ನು ಉತ್ತಮಗೊಳಿಸಬೇಕೆಂದು ಹೇಳಿದ್ದಾರೆ. ಯಾತಕ್ಕೆ? ಯಾರಿಗಾಗಿ? ನಮ್ಮಲ್ಲಿ ಈ ದಿವಸ ಯುದ್ಧಕ್ಕೆ ಈ ಕುದುರೆಗಳನ್ನು ಬಳಸುತ್ತಿಲ್ಲ. ಅಂದಾಗ ಈ ರೇಸ್ ಕುದುರೆಗಳನ್ನೇಕೆ ಸಾಕಬೇಕು? ಇದರಿಂದ ಆ ಬುಕ್ಕೀಸ್‌ಗಳಿಗೆ ಪ್ರಯೋಜನವುಂಟು. ಇದರಿಂದ ಆ ಓನರಿಗೂ ಪ್ರಯೋಜನವಿಲ್ಲ. ಆದುದರಿಂದ ಇದು ಅರ್ಥವಿಲ್ಲದ ಮಾತು. ನನಗೆ ಹಾಗೇ ಆಲೋಚಿಸಿದ್ದರಲ್ಲಿ ನಮ್ಮ ಈಗಿನ ಕಾಂಗ್ರೆಸ್ ಸರ್ಕಾರಕ್ಕೂ ಮತ್ತು ಆ ಚೀನಾದಲ್ಲಿರತಕ್ಕ ಚಿಯೊಂಗ ಕೈಷೇಕರ ಸರ್ಕಾರಕ್ಕೂ ಏನೂ ವ್ಯತ್ಯಾಸವಿಲ್ಲ. ಅಲ್ಲಿ ಅವರು ಜನರನ್ನು ನಿರ್ವೀರ್ಯರನ್ನಾಗಿ ಮಾಡಲು ಅಫೀಮನ್ನು ತಿನ್ನಿಸುತ್ತಿದ್ದರಂತೆ. ಇಲ್ಲಿ ನಮ್ಮ ಸರ್ಕಾರದವರು ಬಡವರಿಗೆ ಈ ರೇಸಿನ ಹುಚ್ಚನ್ನು ಹುಟ್ಟಿಸಿ ಅವರನ್ನು ನಿರ್ವೀರ್ಯರನ್ನಾಗಿ ಮಾಡುತ್ತಿದ್ದಾರೆ. ಆದ್ದರಿಂದ ಈ ಎರಡೂ ಸರ್ಕಾರಗಳು ನನ್ನ ದೃಷ್ಟಿಯಲ್ಲ ಒಂದೇ ಎಂದು ಹೇಳುತ್ತೇನೆ.

ಶ್ರೀ ಎಂ ವೈ. ಘೋರ್ಪಡೆ.—ಮೈಸೂರಲ್ಲಿ ರೇಸ್ ತಮಗಾಗಿ ಇರುವುದು

ಶ್ರೀ ಕೆ. ಎಂ. ನಾಗಣ್ಣ.—ನಾನು ಆಗಲೇ ಹೇಳಿದಂತೆ ಲಕ್ಷಾಂತರ ರೂಪಾಯಿ ಕಳೆದ ಕೊಂಡ ನಂತರ ಅದನ್ನೀಗ ಬಟ್ಟೆ ಎಂದು ಹೇಳಿದ್ದೇನೆ. ನನ್ನಂಥವನಿಗೆ ಅದನ್ನು ತಡೆದುಕೊಳ್ಳುವುದಕ್ಕಾಗಲಿಲ್ಲ ಅಂದರೆ ಇನ್ನು ಸಾಮಾನ್ಯ ಜನರ ಪಾಡೇನು ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ನಾಗಣ್ಣನವರು ಕೈ ಸುಟ್ಟು ಕೊಂಡು ಅವರ ಅನುಭವ ಹೇಳುತ್ತಿದ್ದಾರೆ. ಅದನ್ನು ರಾಜ್ಯದಲ್ಲಿರತಕ್ಕ ಬಡವರ ದರಿದ್ರರ ಹಿತದೃಷ್ಟಿಯಿಂದ ರೇಸನ್ನು ರದ್ದು ಮಾಡಿ ಎಂದು ಅವರು ಸರ್ಕಾರವನ್ನು ಪ್ರಾರ್ಥಿಸುತ್ತ ಇದ್ದಾರೆ.

ಶ್ರೀ ಕೆ. ಎಂ. ನಾಗಣ್ಣ.— ಇನ್ನೂ ಈ ಕಾಂಗ್ರೆಸ್ ಸರ್ಕಾರಕ್ಕೆ ಏನಾದರೂ ಅಪ್ಪಿತಪ್ಪಿ ಅಷ್ಟಿಷ್ಟು ಒಳ್ಳೇ ಹೆಸರೇನಾದರೂ ಇದ್ದರೆ ಅದನ್ನು ಇಂಥ ಕಾನೂನು ತಂದು ಅದನ್ನೂ ಹಾಳು ಮಾಡಿಕೊಳ್ಳಬೇಡಿ ಎಂದು ಹೇಳುತ್ತಿದ್ದೇನೆ. ಆಗಲ್ಲೇ ಶ್ರೀಮಾನ್ ಬಂಗಾರಪ್ಪನವರು ಹೇಳಿದಂತೆ ಈಗ ಆಡಳಿತ ನಡೆತಕ್ಕ ಜನರು ನಾಳೆ ಬೀದಿಯಲ್ಲಿ ತಲೆ ಎತ್ತಿ ತಿರುಗಾಡಲು ಕಷ್ಟ ಬರುತ್ತದೆ. ಆದುದರಿಂದ ಇವರು ಎಚ್ಚರದಿಂದ ಇರಬೇಕು. ದಿನಕ್ಕೆ ಎರಡು ಊಟಕ್ಕೂ ಗತಿಯಿಲ್ಲದಂಥ ನಿರ್ಗತಿ ಕರಿಗೆ ಇದರ ಪ್ರಚೋದನೆ ಮಾಡಿ ಅವರನ್ನು ಬೀದಿಯ ಭೀಕಾರಿಗಳನ್ನಾಗಿ ಮಾಡುತ್ತಿದ್ದಾರೆ. ಮಾನ್ಯ ಘೋರ್ಪಡೆಯವರು ಬಡವರಲ್ಲ. ಅವರು ರಾಜಮನೆತನಕ್ಕೆ ಸೇರಿದವರು. ಅವರಿಗೆ ಬಡವರ ಬೀದಿಯಲ್ಲಿ ಓಡಾಡಿದ ಅನುಭವ ಸಹಾ ಇರುವುದಿಲ್ಲ. ನಿಮಗೆ....

ಉಪಾಧ್ಯಕ್ಷರು.—ಮಾನ್ಯ ನಾಗಣ್ಣನವರೇ.....ತಾವು ಪದೇ ಪದೇ "ನೀವು—ನೀವು" ಎಂದು ಹೇಳಿದರೆ ಅದು ಅಧ್ಯಕ್ಷರಿಗೆ ಆನ್ವಯಿಸುತ್ತದೆ. ಅದನ್ನು ದಯಮಾಡಿ ತಿದ್ದಿಕೊಳ್ಳಬೇಕು.

ಶ್ರೀ ಕೆ. ಎಂ. ನಾಗಣ್ಣ.....ಸರ್ಕಾರದವರು ಮಾಡುತ್ತಿರುವ ಕೆಲಸಗಳನ್ನು ನೋಡಿದರೆ ನನಗೆ ಹೊಟ್ಟೆ ಉರಿಯುತ್ತದೆ. ವಿಂಟರ್ ವೊಟಿಂಗಿಗೆ ಪರ್ಮಿಷನ್ ಕೊಡಬೇಡಿ ಎಂದರೂ ಕೊಟ್ಟರು. ಬಡವರಿಗೆ ಚೆಟ್ಟಿ ಮಾಡುವುದಕ್ಕೆ ತೆಂಗಿನ ಕಾಯಿಬೆಲೆ 2 ರೂಪಾಯಿಗಳಾದ್ದರಿಂದ ಮತ್ತು ಕಳ್ಳಿಬೇಜ ಅದೂ ಕೂಡ ಬಹಳ ದುಬಾರಿಯಾದ್ದರಿಂದ ಹುರುಳಿಕಾಳು ಸೇರಿಗೆ ಒಂದೂಕಾಲು ರೂಪಾಯಿಗೆ ಸಿಕ್ಕುತ್ತೆಂದು ಹುರುಳೀಕಾಳು ಚೆಟ್ಟಿ ತಿನ್ನುತ್ತಿದ್ದವರಿಗೆ ಅವರಿಗೆ ಪ್ರಚೋದನೆ ಮಾಡಿ ರೇಸಿಗೆ ಹೋಗತಕ್ಕ ಚಟವನ್ನು ಹುಟ್ಟಿಸತಕ್ಕ ಸರ್ಕಾರವನ್ನು ಏನೆಂದು

ಕರೆಯಬೇಕು ? ಸರ್ಕಾರವನ್ನು ನಡೆಸುವುದಕ್ಕೆ ಈ ಜನರು ಖಂಡಿತ ಲಾಯಕ್ಕಾಗಿಲ್ಲ ಎಂದು ಹೇಳುತ್ತೇನೆ. ಸರ್ಕಾರದವರು ಇಂಥ ಬೆಟ್ಟಿಂಗನ್ನು ರದ್ದು ಮಾಡುವುದಕ್ಕೆ ಒಂದು ಬಿಲ್ಲನ್ನು ತಂದರೆ ನಾವೆಲ್ಲರೂ ಒಮ್ಮತ ಒಪ್ಪಿಗೆ ಕೊಡುತ್ತೇವೆ. ನಾವೇ ಬೇಕಾದರೂ ಒಂದು ಬಿಲ್ಲನ್ನು ತರಬೇಕಿದ್ದೆವು. ಅದಕ್ಕೆ ಸರ್ಕಾರದವರು ಉತ್ತೇಜನ ಕೊಡುತ್ತಾರೇನು ? ಈ ಮಂತ್ರಿ ಮಂಡಲದಲ್ಲಿರತಕ್ಕವರಿಗೆ ಸಂಸಾರಗಳಿಲ್ಲವೇ ಹೆಂಡತಿ ಮಕ್ಕಳಿಲ್ಲವೇ ? ಬಡವರನ್ನು ಕಾಪಾಡತಕ್ಕ ಸರ್ಕಾರವೇ ಇದು ? ಬಾಯಲ್ಲಿ ಇವರು ಯಾವಾಗಲೂ ಬಡವರ ಜೊತೆಯಲ್ಲೇ ಇರತಕ್ಕವರೆಂದು ಹೇಳಿಕೊಂಡು ಇವರು ಮಾಡತಕ್ಕ ಕೆಲಸನೇ ಇದು ? ಫೋರ್ಡ್‌ಡೆಯವರಿಗೂ ಬಡತನಕ್ಕೂ ಸಂಬಂಧವಿಲ್ಲ. ದಯಮಾಡಿ ಬಡವರ ಹೆಂಡತಿ ಮಕ್ಕಳ ಮೇಲೆ ಕರುಣೆ ಇಟ್ಟು ರೇಸಿಗೆ ಅವಕಾಶ ಮಾಡಬಾರದು. ಗೃಹಿಣಿಯರ ಪರವಾಗಿ ಇಷ್ಟು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ರೇಸಿನಿಂದ ಹೆಂಡತಿ ಮಕ್ಕಳು ಎಷ್ಟು ಕಷ್ಟಪಡುವರೆಂಬುದು ಅನೇಕ ಗೃಹಿಣಿಯರಿಗೆ ಗೊತ್ತಿದೆ. ಗಂಡಸರು ಜೂಜಾಡಿ ಹೆಂಡತಿ ಮಕ್ಕಳಿಗೆ ತೊಂದರೆ ಮಾಡಲು ಅವಕಾಶ ದಯೆಯಿಟ್ಟು ಕೊಡಬಾರದು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

‡ ಶ್ರೀ ಟಿ. ಆರ್. ಶಾಮಣ್ಣ (ಕೋಟೆ) :—ಮಾನ್ಯ ಉಪಾಧ್ಯಕ್ಷರೇ, ಈಗ ನನ್ನ ಹಿರಿಯ ಮಿತ್ರರಾದ ಶ್ರೀಮಾನ್ ನಾಗಣ್ಣನವರು ತಮ್ಮ ಅನುಭವವನ್ನು ರೇಸಿನಿಂದ ಯಾರಿಗೆ ಎಷ್ಟು ಕಷ್ಟವಾಗುತ್ತದೆ. ಏನು ಅನಾಹುತವಾಗುತ್ತದೆ ಎಂಬುದರ ಬಗ್ಗೆ ಸಾಕಾದಷ್ಟು ಹೇಳಿದ್ದಾರೆ. ಅವರು ರೇಸಿಗೆ ಹೋಗಿ ಕಳೆದುಕೊಂಡಿರುವುದರಿಂದ ಆದರಿಂದ ಎಷ್ಟು ಕಷ್ಟವಿದೆ ಎಂಬುದು ಸಹ ಅವರಿಗೆ ಗೊತ್ತಿದೆ ನಾನು ರೇಸ್ ಕೋರ್ಸಿನೊಳಕ್ಕೆ ಕಾಲಿಟ್ಟಿಲ್ಲ. ರೇಸಿನ ಬಗ್ಗೆ ಹೆಚ್ಚು ವಿಚಾರಗಳು ಗೊತ್ತಿಲ್ಲ. ನನಗೆ ರೇಸಿನ ಅನುಭವವಿಲ್ಲದಿದ್ದರೂ ಕೂಡ ರೇಸಿನಿಂದ ಮನೆ ಹಾಳು ಮಾಡಿಕೊಂಡವರ ವಿಚಾರ ಜೆನ್ನಾಗಿ ಗೊತ್ತಿರುವುದರಿಂದ ಅದರ ಬಗ್ಗೆ ಎರಡು ಮಾತುಗಳನ್ನು ಹೇಳಲು ಅವಕಾಶ ಕೊಡಬೇಕು.

ಒಂದನೆಯದಾಗಿ ನಮ್ಮ ಮುಂದಿರುವ ಮಸೂದೆಯನ್ನು ಸಾರ್ವಜನಿಕರ ಅಭಿಪ್ರಾಯವನ್ನು ಪಡೆಯುವುದಕ್ಕೆ ದಯೆಯಿಟ್ಟು ಕಳಿಸಿಕೊಡಿ ಎಂದು ಒಂದ ನಿರ್ಣಯವನ್ನು ತಮ್ಮ ಮುಂದಿಟ್ಟಿದ್ದೇನೆ ಅದಕ್ಕೆ ನಾಗಣ್ಣನವರೂ ಒಪ್ಪಿಕೊಂಡಿದ್ದಾರೆ ಈಗ ರೇಸ್ ಕೋರ್ಸ್ ಬಗ್ಗೆ ಸರಕಾರಕ್ಕೇಕೆ ಇಷ್ಟು ಆಸಕ್ತಿ ಎಂದು ಸಂದೇಹ ಬಂದಿದೆ. ಇಲ್ಲಿ ಅನೇಕ ರೀತಿಯಿಂದ ರೇಸುಗಳನ್ನು ನಡೆಸುತ್ತಿದ್ದಾರೆ. ರೇಸು ನಡೆಸುವವರ ಪ್ರಭಾವದಿಂದ ಅವರಿಗೆ ಅನುಕೂಲವಾಗಲೆಂದು ಇಂಥ ತಿದ್ದುಪಡಿಗಳನ್ನು ತರುತ್ತಿದ್ದಾರೆ ಎಂಬುದು ನನ್ನ ಭಾವನೆ. ರೇಸು ಪ್ರಾರಂಭವಾದಮೇಲೆ ನನಗೆ ಗೊತ್ತಿರುವ ಹಾಗೆ ಸುಮಾರು 8 ಡಿಫಾಲ್ಕೇಷನ್ನುಗಳು ಮತ್ತು ಮೂರು ಸೂಯು

(ಶ್ರೀ ಟಿ. ಆರ್. ಶಾಮಣ್ಣ)

ಸೈಡುಗಳು ಆಗಿವೆ. ಅನೇಕರು ಕಾರ್ಪೊರೇಷನ್ನಿನ ಕಂದಾಯದ ಹಣ ಮತ್ತು ಖಜಾನೆಯ ಹಣ ದುರುಪಯೋಗ ಮಾಡಿ ಇಬ್ಬರು ಸೂಯಸೈಡ್ ಮಾಡಿಕೊಂಡರು ಮತ್ತು ನಾಲ್ಕೈದು ಮಂದಿ ಕೆಲಸ ಕಳೆದು ಕೊಂಡರು. ಇದರಿಂದ ಅವರ ಮನೆಯವರು ಒದ್ದಾಡುತ್ತಿದ್ದಾರೆ. ಹೀಗೆ ರೇಸಿನಲ್ಲಿ ಅನೇಕ ಸಂದರ್ಭಗಳಲ್ಲಿ ಅನೇಕರು ತಮ್ಮ ಸರ್ವಸ್ವವನ್ನೂ ಕಳೆದುಕೊಂಡಿರುವುದನ್ನು ನೋಡಿದ್ದೇನೆ. ರೇಸಿನ ದಿನ ಮಾರ್ವಾಡಿ ಅಂಗಡಿಗಳಲ್ಲಿ ಎಷ್ಟೋ ಒಡವೆ ವಸ್ತುಗಳನ್ನು ಒತ್ತೆಯಿಡುವುದರಿಂದ ಹೆಂಡತಿ ಮಕ್ಕಳಿಗೆ ಎಷ್ಟೋ ಕಷ್ಟವಾಗಿದೆ, ಇದನ್ನು ಲಕ್ಷಕ್ಕೆ ತೆಗೆದುಕೊಂಡರೆ ಜನರ ಕಷ್ಟದ ಅರಿವಾಗುವುದು. ನನ್ನ ಸಂಬಂಧಿಯೊಬ್ಬರು ರೇಸಿನ ಚಟದಿಂದ ಸರ್ವಸ್ವವನ್ನೂ ಕಳೆದುಕೊಂಡಿದ್ದಾರೆ. ಬೆಂಗಳೂರು, ಮದ್ರಾಸು, ಬೊಂಬಾಯಿ ಗಳಲ್ಲಿ ನಡೆಯುವ ರೇಸುಗಳಿಗೆ ಹೋಗಿ ಒಳ್ಳೆಯ ಸ್ಥಿತಿಯಲ್ಲಿದ್ದವರು ಎಲ್ಲವನ್ನೂ ಕಳೆದುಕೊಂಡಿದ್ದಾರೆ. ನಾಗಣ್ಣನವರು ಹೇಳಿದಹಾಗೆ ಅನೇಕರು ಹೆಂಡತಿಯ ಒಡವೆ ವಸ್ತುಗಳನ್ನು ಮಾರುವರು, ಒತ್ತೆ ಇಡುವರು. ತಾಳಿಯನ್ನು ಕೂಡ ತೆಗೆದು ಕೊಂಡುಹೋಗಿರುವ ಸಂದರ್ಭಗಳುಂಟು. ಇದರಿಂದ ಹೆಣ್ಣುಮಕ್ಕಳು ಬಹಳ ಕಷ್ಟಕ್ಕೆ ಗುರಿಯಾಗಿದ್ದಾರೆ. ಈಗಿನ ಹೆಣ್ಣುಮಕ್ಕಳ ವಿಚಾರ ನಾನು ಹೇಳುತ್ತಿಲ್ಲ, ಹಿಂದಿನ ಕಾಲದವರ ವಿಚಾರ ಹೇಳುವುದು. ಆವರು ಮನೆಯಿಂದ ಹೊರಗೆ ಬರುವುದಿಲ್ಲ. ಈಗ ಕಾರ್ಪೊರೇಷನ್ನಿಗೆ, ಸರಕಾರಕ್ಕೆ ರೇಸಿನಿಂದ ವರಮಾನವಿದೆ. ಈಗ ಟರ್ಫ್ ಕ್ಲಬ್ ಇದೆ, ರೇಸ್‌ನ ವರಮಾನದಲ್ಲಿ ಕಾಕ್‌ಟೈಲ್ ಪಾರ್ಟೀಸ್ ವರ್ಷಕ್ಕೆ ಐದಾರು ಸಲ ನಡೆಯುವುದು, ಪ್ರತಿಯೊಂದು ಪಾರ್ಟಿಗೂ ಲಕ್ಷಾಂತರ ರೂಪಾಯಿ ಗಳ ಖರ್ಚಿದೆ. ಅದರಲ್ಲಿ ಎಲ್ಲರಿಗೂ ಕೂಡ ಮಾದಕ ಪದಾರ್ಥ ತಂದು ಹಂಚುವರು. ಈ ಪಾರ್ಟಿ ನಡೆಸುವುದು ಟರ್ಫ್ ಕ್ಲಬ್ಬಿಗೆ ದೊಡ್ಡ ಕೆಲಸವಾಗಿದೆ.

ರೇಸು ಗ್ಯಾಂಬ್ಲಿಂಗಿನಲ್ಲಿ ಬರುವುದಿಲ್ಲವೆಂದು ಹೇಳುತ್ತಾರೆ. ಈಗ ಬೆಂಗಳೂರಿನಲ್ಲಿ ಸುಮಾರು 500 ಕ್ಲಬ್ಬುಗಳಿವೆ, ಇವುಗಳಲ್ಲಿ ರಾತ್ರಿ ವೇಳೆ ಲಕ್ಷಾಂತರ ರೂಪಾಯಿ ವ್ಯಯವಾಗುತ್ತಿದೆ. ಅನೇಕ ಸಲ ಈ ವಿಚಾರವನ್ನು ಸರಕಾರಕ್ಕೆ ತಿಳಿಸಿದೆ. ಅದರೂ ಅದಕ್ಕೆ ಆಡ್ಡಿ ಆತಂಕವಿಲ್ಲ. ಪೋಲೀಸ್ ಆಕ್ಟಿನ ರಕ್ಷಣೆ ಪಡೆದು ಯಾವ ಕ್ಲಬ್ಬನ್ನು ನಿಲ್ಲಿಸಲಾಗಿದೆ ? ಇದರಿಂದ ಪೋಲೀಸರಿಗೆಷ್ಟು ಮಾಮೂಲು ಬರುವುದು ಎಂದು ವಿವರಣೆ ತರಿಸಿಕೊಂಡರೆ ಒಳ್ಳೆಯದು. ಗ್ಯಾಂಬ್ಲಿಂಗನ್ನು ಹಿಡಿಯಲು ಸರಕಾರದ ಕೈಲಾಗದು. ಆದೇರೀತಿಯಲ್ಲಿ ರೇಸು ಪರೋಕ್ಷವಾದ ಜೂಜು ಬೊಂಬಾಯಿ, ಕಲ್ಕತ್ತಗಳಲ್ಲೂ ಜೂಜು ನಡೆಯಲು ಅವಕಾಶ ಮಾಡಲಾಗಿದೆ, ಅಲ್ಲಿಗೆ ಕೂಡ ಇಲ್ಲಿಂದ ಜನರು ಹೋಗುವರು. ಆದರೆ ಎಷ್ಟು ಸಂದರ್ಭಗಳಲ್ಲಿ ಗ್ಯಾಂಬ್ಲಿಂಗ್ ಹಿಡಿಯಲು ಅವಕಾಶವಾಗಿದೆ ? ಇದನ್ನು ವಿಚಾರಮಾಡಿ ನೋಡಿ. ನಾನೊಂದು ವಿವರಣೆ ಕೇಳಿದ್ದೇನೆ ಅದಕ್ಕೇನು ಮಾಡಿದ್ದೀರಿ ಎಂಬುದನ್ನು ಹೇಳಬೇಕು.

ಆಫ್ ಕೋರ್ಸ್ ಬೆಟಿಂಗ್ ಎಂದು ದಕ್ಷಿಣ ವಲಯದಲ್ಲಿ ನೀಲಗಿರಿ, ಮದ್ರಾಸು, ಬೆಂಗಳೂರು, ಮೈಸೂರು ಮುಂತಾದ ಕಡೆ ನಡೆಯುವುದು ಬೊಂಬಾಯಿ, ಕಲ್ಕತ್ತಾಗಳಲ್ಲಿ ವರ್ಷಪೂರ್ತಿ ರೇಸು ನಡೆಯುವುದು. ಇಂಡಿಯಾ ದೇಶದಲ್ಲಿ 365 ದಿನಸವೂ ಒಂದಲ್ಲ ಒಂದು ಕಡೆ ರೇಸು ನಡೆಯುವುದು. ಬೆಂಗಳೂರಿನಲ್ಲೂ ವರ್ಷಗಟ್ಟಲೆ ರೇಸು ನಡೆಸುವ ಒಂದು ಉದ್ದೇಶ ಬಿಲ್ಲಿನಲ್ಲಿ ನಮೂದಾಗಿದೆ. ಇದರಿಂದ ಗ್ಯಾಂಬ್ಲಿಂಗಿಗೆ ಹೆಚ್ಚು ಉತ್ತೇಜನ ಕೊಡುತ್ತಿದ್ದೀರಿ, ಆದುದರಿಂದ ಈ ಜೂಜಿನ ಬಗ್ಗೆ ಸಂಪೂರ್ಣವಾಗಿ ವಿರೋಧ ವ್ಯಕ್ತಮಾಡಬೇಕಾಗಿದೆ ರೇಸು ನಡೆಯು ದಿನ ಅಲ್ಲಿಗೆ ಹೋಗುವವರು ಏನು ಬೇಕಾದರೂ ಮ್ಯಾಡಲು ಸಿದ್ಧವಾಗಿರುವರು, ಹಣಕ್ಕಾಗಿ ಏನು ಬೇಕಾದರೂ ಮ್ಯಾಡುವರು. ರೇಸಿನಿಂದ ಸರಕಾರ 2 ಕೋಟಿ ರೂಪಾಯಿ ಪಡೆಯುವುದು, ರೇಸ್ ಕ್ಲಬ್ಬಿನವರು ಸ್ವಲ್ಪ ಸಂಪಾದನೆ ತೆಗೆದುಕೊಳ್ಳುವರು ಗೆದ್ದವರಿಗೆ ಸ್ವಲ್ಪ ಭಾಗ ಹೋಗುವುದು. ಇದರಿಂದ ಕಷ್ಟ ಪಡುವವರೇ ಜಾಸ್ತಿ. ತಮ್ಮ ಕಾಲದಲ್ಲಿ ಸೋಷಿಯಲಿಸಂ ಜಾರಿಗೆ ತರುವುದಾಗಿ ಹೇಳುವ ಸರಕಾರ ಒಂದು ಕಡೆ ಲಾಟರಿ ನಡೆಸುತ್ತಿದೆ, ಇನ್ನೊಂದು ಕಡೆ ರೇಸನ್ನು ನಡೆಸಲು ಅವಕಾಶ ಕೊಡುವುದು. ಇದು ಸೋಷಿಯಲಿಸಂಗೆ ಪೂರ್ಣ ವಿರೋಧ ಎಂದು ಹೇಳಲಿಷ್ಟಪಡುತ್ತೇನೆ.

ಈಗ ಇದರಲ್ಲಿ ಹೆಚ್ಚಿಗೆ ನಮಗೆ ಏನೂ ಅವಕಾಶವಿಲ್ಲ. ಒಂದನೆಯದಾಗಿ, ಆಫ್ ಕೋರ್ಸ್ ಬೆಟಿಂಗ್‌ನ್ನು ಕ್ರಮಪಡಿಸುವುದಕ್ಕೆ, ತಿದ್ದುಪಡಿ ಮಸೂದೆ ನಮ್ಮ ಮುಂದೆ ಇದೆ. ಬೆಟಿಂಗ್‌ನ್ನು ತಾವು ಖಂಡಿತವಾಗಿಯೂ ತಪ್ಪಿಸುವುದಕ್ಕಾಗುವುದಿಲ್ಲ. ಆಟ ನಡೆಯುತ್ತಾ ಇರತಕ್ಕ ಕಾಲದಲ್ಲಿ ಅನೇಕ ಅಕ್ರಮವಾದಂಥ ಬೆಟ್ಟಿಂಗ್‌ಗಳು ನಡೆಯುತ್ತವೆ, ಇದರಲ್ಲಿ ಬೆಟ್ಟಿಂಗ್ ಅನ್ನು ಯಾವ ರೀತಿ ಕ್ರಮ ಪಡಿಸುವುದಕ್ಕಾಗುತ್ತದೆ ಎನ್ನುವುದನ್ನು ವಿವರವಾಗಿ ಹೇಳಿದರೆ ಒಳ್ಳೆಯದು. ನನಗೆ ತಿಳಿದಮಟ್ಟಿಗೆ ರೇಸ್‌ಕೋರ್ಸ್‌ನಲ್ಲಿ ಸ್ವಲ್ಪ ಅನ್ಯಾಯಗಳಾಗುತ್ತವೆ, ಗಲಾಟೆಗಳಾಗುತ್ತವೆ, ಇದರ ಬಗ್ಗೆ ನಿಮ್ಮ ಹತೋಟಿಯನ್ನು ಏನಾದರೂ ಇಟ್ಟುಕೊಳ್ಳುವುದಕ್ಕೆ ಸಾಧ್ಯವೇ ? ಈ ಅಕ್ರಮ ಅನ್ಯಾಯಗಳನ್ನು ತಡೆಗಟ್ಟುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ಎನ್ನುವುದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ರೇಸ್‌ಕೋರ್ಸಿನ ಸ್ಥಳವನ್ನು ಬದಲಾವಣೆ ಮಾಡಬೇಕು, ಈಗ ಇರುವ ಜಾಗದಿಂದ ಇದನ್ನು ಪಿಪ್ಟ್ ಮಾಡಬೇಕು ಎನ್ನುವ ಯೋಚನೆ ಇದೆ. ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು. ಸಾರ್ವಜನಿಕರಿಗೆ ಉಪಯೋಗವಾಗತಕ್ಕಂಥ ಸ್ಥಳದಲ್ಲಿ ಇದನ್ನು ನಡೆಸುವುದು ಒಳ್ಳೆಯದಲ್ಲ, ಎಲ್ಲಿಗಾದರೂ ದೂರ ಇದನ್ನು ಎತ್ತಿ ಹಾಕಿದರೆ ಒಳ್ಳೆಯದು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ನಾಗಣ್ಣನವರು ಹೇಳಿದ ಹಾಗೆ, ಇದರಿಂದ ಯಾರಿಗೂ ಒಳ್ಳೆಯದು ಆಗುವುದಿಲ್ಲ, ಒಳ್ಳೆಯದು ಆಗುವುದು ಸ್ಟಿವರ್ಡ್ಸ್‌ಗೆ, ಬುಕ್ಕೀಸ್‌ಗೆ ಮಾತ್ರ.

4-30 P. M.

ಶ್ರೀ ಎಸ್. ಬಂಗಾರಪ್ಪ.—ಈಗ ಸರ್ಕಾರಕ್ಕೆ 16 ಕೋಟಿ ರೂಪಾಯಿಗಳ ಡಿಫಿಸಿಟ್ ಇದೆ, ಇದನ್ನು ಭರ್ತಿಮಾಡುತ್ತಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ಹೆಚ್ಚಾಗಿ ಕುಡಿಯುವವರಿಗೆ ಮತ್ತು ಸ್ಟೂಯ್ವರ್ಡ್ಸ್, ಪ್ರಭಾವಶಾಲಿಗಳಾದ ಕಾರ್ಯದರ್ಶಿಗಳು ಇವರಿಗೆ ಮಾತ್ರ ಈ ರೇಸ್ ಕ್ಲಬ್‌ನ ಲಾಭ ಗೊತ್ತು. ಕಾರ್ಯದರ್ಶಿಗಳು ಇದನ್ನು ತಮ್ಮ ಪ್ರೈವೇಟ್ ಪ್ರಾಪರ್ಟಿ ಎನ್ನುವ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿದ್ದಾರೆ ಎನ್ನುವ ಅಂಶವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿ ಈ ಕಾರ್ಯದರ್ಶಿ ಸ್ಥಾನಕ್ಕೆ ಗೆದ್ದು ಬರುವುದು ತುಂಬ ಕಷ್ಟ, ಅಸೆಂಬ್ಲಿಗಾದರೂ ಗೆದ್ದು ಬರಬಹುದು ಆದರೆ ಬೆಂಗಳೂರು ಟರ್ಫ್ ಕ್ಲಬ್‌ಗೆ ಸೆಕ್ರಟರಿಯಾಗಿ ಗೆದ್ದು ಬರುವುದು ಕಷ್ಟ. ಇಲ್ಲಿ ಹೊಸ ಮೆಂಬರ್ಸ್ ಯಾರನ್ನೂ ತೆಗೆದುಕೊಳ್ಳುವುದಿಲ್ಲ. ಇದು ಸಾರ್ವಜನಿಕ ಸಂಸ್ಥೆಯಲ್ಲ. ಇದು ಒಂದು ಮೊನೋಪಲೈಸ್ಡ್ ಗ್ರೂಪ್ ಇದ್ದ ಹಾಗೆ ಇದೆ. ಸರ್ಕಾರದ ಪ್ರತಿನಿಧಿಗಳನ್ನು ಅಲ್ಲಿಗೆ ಹಾಕುವುದಕ್ಕೆ ಎಷ್ಟು ಒತ್ತಡ ಬರುತ್ತದೆ ಎಂದು ತಮಗೆ ಗೊತ್ತಿದೆ. ಇದರಲ್ಲಿ ಯಾವುದೋ ಒಂದು ಇಂಟರೆಸ್ಟ್ ಇದೆ. ಈ ಮೊನೋಪಲಿಯನ್ನು ತಡೆಗಟ್ಟುವುದಕ್ಕೆ ಏನಾದರೂ ಒಂದು ಕ್ರಮವನ್ನು ತಗೆದುಕೊಳ್ಳುವುದಕ್ಕೆ ಪ್ರಯತ್ನ ಪಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿ ಒಂದು ಗುಂಪು ಇದೆ, ಅವರಲ್ಲಿ ಮಾತ್ರ ಕೆಲವರು ಸ್ಟೂಯ್ವರ್ಡ್ಸ್ ಆಗುತ್ತಾರೆ, ಬೇರೆಯವರು ಆಗುವುದಕ್ಕೆ ಅವರು ಅವಕಾಶ ಕೊಡುವುದಿಲ್ಲ. ರೇಸಿಗೆ ಹೋಗುವ ಜನರು, ನಿಮ್ಮ ಸೆಕ್ರೆಟರೇಯಟ್‌ನಲ್ಲಿ ರೇಸ್ ನಡೆಯುವ ದಿನದಲ್ಲಿ ಅಟೆಂಡೆನ್ಸ್ ತರಿಸಿ ನೋಡಿ, ಎಷ್ಟು ಜನ ಇಲ್ಲಿಗೆ ಹೋಗುತ್ತಾರೆ, ಅರ್ಧ ದಿವಸ ರಜ ಹಾಕಿಯೋ ಅಥವಾ ಹಾಗೆಯೋ ಹೋಗಿರುತ್ತಾರೆ, ಇದರಿಂದ ಒಂದು ಕಡೆ ಬಡವರು ಕಷ್ಟಕ್ಕೆ ಸಿಕ್ಕಿ ನಾಯುತ್ತಿರುತ್ತಾರೆ, ಇನ್ನೊಂದು ಕಡೆ ಆಫೀಸಿನಲ್ಲಿ ಸರಿಯಾಗಿ ಸಾರ್ವಜನಿಕರ ಕೆಲಸವನ್ನು ಮಾಡದೆ ಇರತಕಂಥಾದ್ದು ಇದೆ. ಇದರಲ್ಲಿ ಹೆಚ್ಚಾಗಿ ಹಣವನ್ನು ಕಳೆದು ಕೊಳ್ಳುವವರೂ ಬಡವರೇ, ಸಾಹುಕಾರರು ಹೆಚ್ಚಾಗಿ ಹಣವನ್ನು ಕಳೆದುಕೊಳ್ಳುವುದಿಲ್ಲ. ಆಮೇಲೆ ಇದರಲ್ಲಿ ಅನೇಕ ರೀತಿಯ ಮಿಸ್ ಆಪ್ರೊಪ್ರಿಯೇಷನ್ ಆಗತಕ್ಕ ಸಂದರ್ಭಗಳು ಉಂಟು. ಇದು ಎರಡು ಕೋಟಿ ಜನಗಳ ರಕ್ಷಣೆಯನ್ನು ಪೀರತಕ್ಕ ದೊಡ್ಡ ಸಮಸ್ಯೆಯಾಗಿದೆ. ಇದನ್ನು ಮೊದಲು ತೆಗೆದು ಹಾಕುವುದಕ್ಕೆ ಪ್ರಯತ್ನಪಡಿ ಎಂದು ಸಲಹೆ ಮಾಡುತ್ತೇನೆ. ಒಂದು ಕಡೆ ಪ್ರೊಹಿಬಿಷನ್‌ನಿಂದ ಹೆಚ್ಚು ಸಂಪಾದನೆ ಮಾಡುವುದು, ಇನ್ನೊಂದು ಕಡೆ ಲಾಟರಿಯಿಂದ ಸಂಪಾದನೆ ಮಾಡುವುದು, ಈ ರೀತಿಯ ಅಕ್ರಮ ಸಂಪಾದನೆ, ಅನೀತಿಯುತ ಸಂಪಾದನೆ ಸರ್ಕಾರಕ್ಕೆ ಬಂದರೆ, ಇದು ಯಾವುದೋ ಒಂದು ರೀತಿಯ ಅನ್ಯತಾ ಖರ್ಚು

ಬಂದು ಹೊರಟು ಹೋಗುತ್ತದೆ. ಇದನ್ನು ತಪ್ಪಿಸಬೇಕು ಎಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಇದರ ಬಗ್ಗೆ ನಮ್ಮ ಮುಂದಿಟ್ಟಿರುವ ತಿದ್ದುಪಡಿಯನ್ನು ಹೆಚ್ಚಾಗಿ ಹೆಂಗಸರ ಸುಖಕ್ಕೋಸ್ಕರ, ಬಡ ನೌಕರರ ಸುಖಕ್ಕೋಸ್ಕರ, ಮತ್ತು ಸಾರ್ವಜನಿಕರಲ್ಲಿ ಶಾಂತಿ ನೆಲೆಸುವ ಉದ್ದೇಶದಿಂದ ದಯವಿಟ್ಟು ವಾಪಸ್ ತೆಗೆದುಕೊಳ್ಳಬೇಕು ಎನ್ನುವುದನ್ನು ತಿಳಿಸಿ, ಸರ್ಕಾರವೂ ಸಹ ಜನಗಳ ಕಷ್ಟವನ್ನು ಅರಿಯಬೇಕು, ಎಂದು ಕೇಳಿಕೊಳ್ಳುತ್ತೇನೆ. ಒಟ್ಟಿನಲ್ಲಿ ಇದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ, ಜನ ಸಾಮಾನ್ಯರ ಅಭಿಪ್ರಾಯ ತೆಗೆದುಕೊಳ್ಳುವುದಕ್ಕೋಸ್ಕರ ಇದನ್ನು ಜನಸಾಮ್ಯಾನ್ಯರಲ್ಲಿ ಸರ್ಕ್ಯುಲೇಟ್ ಮಾಡಿ, 30ನೇ ತಾರೀಖಿನೊಳಗೆ ಅವರ ಅಭಿಪ್ರಾಯವನ್ನು ತೆಗೆದುಕೊಂಡರೆ, ಆಗ ಎಷ್ಟು ಜನ ಇದನ್ನು ಬೇಕು ಎಂದು ಹೇಳುತ್ತಾರೆ, ಎಷ್ಟು ಜನ ಬೇಡ ಅನ್ನುತ್ತಾರೆ ಎನ್ನುವುದು ಗೊತ್ತಾಗುತ್ತದೆ. ಅದನ್ನು ನೋಡಿಕೊಂಡು ಮುಂದುವರಿದರೆ ತಕ್ಕ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಈ ಬಿಲ್ಲನ್ನು ಮುಂದುವರಿಸದೆ, ಸಾರ್ವಜನಿಕರ ಒಂದು ಒಪ್ಪಿಗೆಯನ್ನು ಪಡೆಯುವುದಕ್ಕೆ ಕಳುಹಿಸಲು ಇದನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಕೊನೆಯದಾಗಿ ಮಾನ್ಯ ನಾಗಣ್ಣನವರು ಹೇಳಿದಂಥ ಮಾತುಗಳಿಗೆ ನನ್ನ ಸಮ್ಮತಿಯನ್ನು ವ್ಯಕ್ತಪಡಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

‡ ಶ್ರೀ ಎಂ. ಮೈ ಫೋರ್ಪಡೆ.—ಮಾನ್ಯ ಅಧ್ಯಕ್ಷರೇ, ಇವತ್ತು ನಾವು ಬಹಳ ಸಣ್ಣ ವಿಷಯವನ್ನು ಚರ್ಚೆ ಮಾಡುತ್ತಿದ್ದೇವೆ. ಇದು ಅಂಥ ದೊಡ್ಡ ವಿಷಯ ಏನೂ ಅಲ್ಲ. ರೇಸಿಂಗ್ ದೃಷ್ಟಿಯಿಂದ ನೋಡಿದರೂ ಕೂಡ, ನಾನು ಅಗಲೇ ಹೇಳಿದ ಪ್ರಕಾರ ಇದರಿಂದ ಎರಡು ಕೋಟಿ ರೂಪಾಯಿ ಸರ್ಕಾರಕ್ಕೆ ಆದಾಯ ಬರುತ್ತದೆ. ಆಫ್‌ಕೋರ್ಸ್ ಬೆಟ್ಟಿಂಗ್‌ನಿಂದ 8 –10 ಲಕ್ಷ ರೂಪಾಯಿ ಮಾತ್ರ ಬರುತ್ತದೆ. ಈ ಅಮೆಂಡ್‌ಮೆಂಟ್ ಬರೀ ಆಫ್‌ಕೋರ್ಸ್ ಬೆಟ್ಟಿಂಗ್‌ಗೆ ಮಾತ್ರ ಸಂಬಂಧಪಟ್ಟದ್ದು. ಆದರೂ ಕೂಡ ಮಾನ್ಯ ಸದಸ್ಯರುಗಳು ರೇಸಿಂಗ್ ಬಗ್ಗೆ ಏನೇನು ಹೇಳಲಿಕ್ಕೆ ಸಾಧ್ಯವೋ ಅದನ್ನೆಲ್ಲಾ ಎಲ್ಲರೂ ಹೇಳಿಬಿಟ್ಟಿದ್ದಾರೆ ನಾನು ರೇಸಿಂಗ್ ಬಗ್ಗೆ ಅಷ್ಟು ದೊಡ್ಡ ಭಾಷಣ ಮಾಡಿದರೆ ಸೂಕ್ತ ಆಗಲಿಕ್ಕೆ ಇಲ್ಲ. ಆದರೆ ಸಂದರ್ಭ ಬಂದಾಗಲೆಲ್ಲಾ, ವಿಷಯ ಬಂದಾಗಲೆಲ್ಲಾ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಏನೆಂದರೆ, ಸಮಾಜದಲ್ಲಿ ಜೂಜಾಡುವುದು ಒಂದು ಪ್ರವೃತ್ತಿ ಏನು ಇದೆ, ಅದನ್ನು ನಿಲ್ಲಿಸುವುದಕ್ಕೆ ಆಗಿಲ್ಲ. ಹಳೆಯ ಮಹಾಭಾರತದ ಕಾಲಕ್ಕೂ ಇದನ್ನು ನಿಲ್ಲಿಸುವುದು ಆಗಿಲ್ಲ. ಕಮ್ಯುನಿಸ್ಟ್ ರಾಷ್ಟ್ರಗಳಲ್ಲಿಯೂ ಜೂಜಾಡುವ ಪ್ರವೃತ್ತಿಯನ್ನು ಸಂಪೂರ್ಣವಾಗಿ ತಡೆಗಟ್ಟಲಿಕ್ಕೆ ಆಗಿಲ್ಲ. ಹಾಗೆ ಎಂದ ತಕ್ಷಣ ನಾವೆಲ್ಲರೂ ಜೂಜಾಡುವುದು ಎಂದು ಅಲ್ಲ. ಎಲ್ಲಿಯವರೆಗೆ

(ಶ್ರೀ ಎಂ. ವೈ. ಘೋರ್ಪಡೆ)

ನಾಗಣ್ಣನವರಂಥವರು ರೇಸಿಂಗ್‌ಗೆ ಹೋಗುತ್ತಾರೋ ಅಲ್ಲಯವರೆಗೆ ರೇಸಿಂಗ್ ಅನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ.

ಪಬ್ಲಿಕ್‌ನ ಒಪೀನಿಯನ್ ತೆಗೆದುಕೊಳ್ಳೋಣ, ಅವರು ರೇಸಿಂಗ್ ಬಿಡಬೇಕು ಜೂಜು ಬೀಡಬೇಕು ಎಂದು ಹೇಳುವುದಾದರೆ ನನಗೆ ಯಾವ ವಿಧವಾದ ಅಭ್ಯಂತರವೂ ಇಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಜೂಜು ಆಡುವವರ ಮೇಲೆ ಹೆಚ್ಚಿಗೆ ಟ್ಯಾಕ್ಸ್ ಹಾಕಿ, ಬಡವರ ಮೇಲೆ ಇವತ್ತು ಹೆಚ್ಚಿಗೆ ಟ್ಯಾಕ್ಸ್ ಹಾಕಿದ್ದೀರಿ.

ಶ್ರೀ ಎಂ. ವೈ. ಘೋರ್ಪಡೆ : ಇವತ್ತು ಚರ್ಚೆ ಮಾಡುತ್ತಾ ಇರುವುದು ಜೂಜಿನ ಬಗ್ಗೆ ಅಲ್ಲ, ಆಫ್-ಕೋರ್ಸ್ ಬೆಟ್ಟಿಂಗ್ ನಡೆಯುತ್ತಾ ಇದೆ. ನಾವಿರಾರು ಜನ ಬೆಟ್ಟಿಂಗ್ ಮಾಡುತ್ತಿದ್ದಾರೆ ನಿಮ್ಮಿಂದ ನಿಲ್ಲಿಸುವುದಕ್ಕೆ ಆಗುವುದಿಲ್ಲ, ಇಲ್ಲೀಗಲ್ ಬೆಟ್ಟಿಂಗ್ ನಡೆಯುತ್ತಿದೆಂದು ನಾಗಣ್ಣನವರು ಸ್ಪಷ್ಟವಾಗಿ ಹೇಳಿದರು. ಅವರೂ ಇವತ್ತು ಜೂಜು ಆಡುತ್ತಾರೆ, ಬೆಟ್ಟಿಂಗ್ ಮಾಡುತ್ತಾರೆ. ಅದನ್ನು ನಿಲ್ಲಿಸುವುದಕ್ಕೆ ಆಗವುದಿಲ್ಲ. ಇವತ್ತು ಲಿಮಿಟೆಡ್ ಪ್ರಶ್ನೆ ಏನು ಎಂದರೆ ಈ ರೀತಿ ಅವರಿಂದ ಸ್ವಲ್ಪ ಮಟ್ಟಿಗೆ ಸರ್ಕಾರಕ್ಕೆ ಟ್ಯಾಕ್ಸ್ ಬರಲಿ ಎಂದು ಉದ್ದೇಶ. ಇವತ್ತು ಏನಾದರೂ ಬೊಂಬಾಯಿಯಲ್ಲಿ ರೇಸ್ ಆಗುತ್ತಾ ಇದ್ದರೆ ಜನ ಜೂಜು ಆಡುತ್ತಾ ಇದ್ದರೆ ಅದನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ಆದುದರಿಂದ ಇದು ರಕ್ತ ಹೀರುವ ಪ್ರಶ್ನೆಯಲ್ಲಿ ದೊಡ್ಡದೊಡ್ಡ ಶಬ್ದಗಳನ್ನು, ಲಘುವಾಗಿ ಉಪಯೋಗಿಸುವುದು ಸಮಂಜಸವಾದುದು ಅಲ್ಲ. ರಕ್ತ ಹೀರುವ ಪ್ರಶ್ನೆ ಇದ್ದರೆ ತಾವು ಏತಕ್ಕೆ ಹೋಗುತ್ತೀರಿ? ತಾವು ರಕ್ತ ಹೀರಿಸಿಕೊಳ್ಳುವುದಕ್ಕೆ ಹೋಗುತ್ತೀರಾ?

ಶ್ರೀ ಕೆ. ಎಂ. ನಾಗಣ್ಣ :—ಬಹಳ ಜನರು, ಕೂಲಿಗಾರರು, ನೌಕರರು ಆಫೀಸುಗಳಲ್ಲಿ ಕೆಲಸ ಮಾಡುವ ನೌಕರರುಗಳ ರಕ್ತವನ್ನು ಹೀರುತ್ತಿದ್ದೀರಿ. ರೇಸಿಂಗ್ ಮುಖಾಂತರ ಇಲ್ಲೀಗಲ್ ಬೆಟ್ಟಿಂಗ್, ಆಫ್-ಕೋರ್ಸ್ ಬೆಟ್ಟಿಂಗ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅಲ್ಲಿ 10 ಆಣಿ, 5 ಆಣಿ, ಒಂದುಕಾಲು ರೂಪಾಯಿ ಬೆಟ್ಟಿಂಗ್ ಮಾಡುತ್ತಾನೆ. ಇದನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ :—ಯಾವ ಸರ್ಕಾರದವರ ಕೈಯಿಂದಲೂ ಗ್ಯಾಂಬ್ಲಿಂಗ್‌ನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲವೆಂದು ಆದೇ ಮಾತನ್ನು ತಾವೂ ಹೇಳಿದರು.

ಶ್ರೀ ಕೆ. ಎಂ. ನಾಗಣ್ಣ :-ಎಲ್ಲಿಯವರೆಗೆ ಪೋಲೀಸರಲ್ಲಿ ದಕ್ಷತೆಯಿಲ್ಲವೋ ಅಲ್ಲಿಯವರೆಗೆ ಇದನ್ನು ನಿಲ್ಲಿಸುವುದಕ್ಕಾಗುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ :-ಈ ಗ್ಯಾಂಬ್ಲಿಂಗನ್ನು ಯಾವ ರೀತಿ ನಿಲ್ಲಿಸುವುದಕ್ಕೆ ಆಗುತ್ತದೆಂದು ಹೇಳಿದರೆ ಅದರ ಬಗ್ಗೆ ಸರ್ಕಾರ ಯೋಚನೆ ಮಾಡುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :-ದಕ್ಷರಾದ ಪೊಲೀಸ್ ಐ. ಜಿ. ಪಿ. ಕರ್ನಾಟಕ ರಾಜ್ಯದಲ್ಲಿ ಇದ್ದರೆ ಗ್ಯಾಂಬ್ಲಿಂಗ್ ನಿಲ್ಲಿಸಬಹುದು, ದುರ್ನಡತೆ ನಿಲ್ಲಿಸಬಹುದು, ಲ್ಯಾಕಿಂಗ್ ಇರುವುದೇ ಅಲ್ಲಿ.

ಶ್ರೀ ಎಂ. ವೈ. ಘೋರ್ಪಡೆ :-ಗ್ಯಾಂಬ್ಲಿಂಗ್ ನಿಲ್ಲಿಸುವುದಕ್ಕೆ ಆಗುವುದಿಲ್ಲ, ಆದ್ದರಿಂದ ಅದನ್ನು ಲೀಗಲೈಸ್ ಮಾಡುವುದರಿಂದ ಸರ್ಕಾರಕ್ಕೆ ಟ್ಯಾಕ್ಸ್ ಆದರೂ ಬರುತ್ತದೆ. ಇನ್ನು ಮುಚಕ ಏತಕ್ಕೆ ಹತೋಟಿಯಲ್ಲಿ ತರಬಾರದು ಎಂದು ಪ್ರಶ್ನೆ ಎತ್ತಿದರು.

ಶ್ರೀ ಕೆ. ಹೆಚ್. ಹನುಮೇಗೌಡ ;-ದರೋಡೆ, ಕಳ್ಳತನ ಮಾಡುವುದನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ, ಅದಕ್ಕೂ ಟ್ಯಾಕ್ಸ್ ಹಾಕಿ ಲೀಗಲೈಸ್ ಮಾಡಿಬಿಡಿ. ಕೊಳ್ಳೆ ಹೊಡೆಯುವುದು, ಕಳ್ಳತನ ಮಾಡುವುದಕ್ಕೂ ಲೀಗಲೈಸ್ ಮಾಡಿದರೆ ಸರ್ಕಾರಕ್ಕೆ ದುಡ್ಡು ಬರುತ್ತದೆ.

ಶ್ರೀ ಎಂ. ವೈ. ಘೋರ್ಪಡೆ ;-ಇಂಗ್ಲೆಂಡ್‌ನಲ್ಲಿ ಫುಟ್ ಬಾಲ್ ಪೂಲ್ ಇದೆ. ಫುಟ್‌ಬಾಲ್ ಮ್ಯಾಚ್ ಆಗುತ್ತಿದ್ದರೆ ಅಲ್ಲೂ ಗ್ಯಾಂಬ್ಲಿಂಗ್ ನಡೆಯುತ್ತದೆ. ಪ್ರತಿಯೊಂದು ಊರಿನಲ್ಲಿಯೂ ಗ್ಯಾಂಬ್ಲಿಂಗ್ ನಡೆಯುತ್ತದೆ. ಯಾರು ಸೋಲುತ್ತಾರೆ, ಯಾರು ಗೆಲ್ಲುತ್ತಾರೆ ಎನ್ನುವ ಬಗ್ಗೆಯೂ ಗ್ಯಾಂಬ್ಲಿಂಗ್ ನಡೆಯುತ್ತದೆ ಅದು ಜಪಾನ್‌ನಲ್ಲಿ ಇದೆ, ರಷ್ಯಾದಲ್ಲಿ ಇದೆ. ಯಾವುದೇ ದೇಶ ತೆಗೆದುಕೊಂಡರೂ ಒಂದೇ ರೀತಿಯ ಗ್ಯಾಂಬ್ಲಿಂಗ್ ನಡೆಯುತ್ತಿದೆ. ಗ್ಯಾಂಬ್ಲಿಂಗ್ ನಿಲ್ಲಿಸುವುದಕ್ಕೆ ಆಗದಿದ್ದರೆ, ಅದು ಇರಲಿ. ಈ ಗ್ಯಾಂಬ್ಲಿಂಗ್ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ವಿಷಯ ಬರಲಿಲ್ಲ. ಇವತ್ತು ನಮ್ಮ ಮುಂದೆ ಇರತಕ್ಕಂಥದ್ದು ಅಫ್ ಕೋರ್ಸ್ ರೇಸಿಂಗ್ ಬೆಟ್ಟಿಂಗ್ ಬಗ್ಗೆ. ಆ ವಿಷಯ ಚರ್ಚೆ ಮಾಡೋಣ.

ಶ್ರೀ ಬಿ. ಪುಟ್ಟಸ್ವಾಮಯ್ಯ :-ಅವರ ಮನಸ್ಸು ಒಪ್ಪುವುದಿಲ್ಲ, ಆದರೂ ತಂದಿದ್ದಾರೆ, ಅವರ ಆತ್ಮ ಒಳ್ಳೆಯದು. ಅವರು ಒಳ್ಳೆಯವರು.

MR. DEPUTY SPEAKER : —It is on behalf of the Government of Karnataka and it is not his personal affair.

ಶ್ರೀ ಎಂ. ವೈ. ಘೋರ್ಪಡೆ :-ಶ್ರೀ ಅಬ್ದುಲ್ ಖುದ್ದೂಸ್ ಅನ್ಸಾರ್‌ರವರು ಬೇರೆ ಪ್ರಶ್ನೆಗಳನ್ನು ಎತ್ತಿದ್ದಾರೆ, ಅದೇ ವಿಷಯವನ್ನು ಶಾಮಣ್ಣನವರೂ ಕೇಳಿದ್ದಾರೆ. ಡೆಪ್ಯುಟಿ ಕಮೀಷನರ್‌ರವರ ಸಿಬ್ಬಂದಿ ಸಾಕಷ್ಟು ಇದೆ. ರೇಸ್ ಕ್ಲಬನ ಲೆಕ್ಕ ಇಡುತ್ತಾರೆ, ಡೆಪ್ಯುಟಿ ಕಮೀಷನರ್‌ರವರು ಚೆಕ್ ಮಾಡುತ್ತಾರೆ. ಹೊಸ ಸಿಬ್ಬಂದಿ ಆದಕೋಸ್ಕರ ನೇಮಕ ಮಾಡಬೇಕಾದ್ದು ಇಲ್ಲ. ಆ ಮೇಲೆ ಬೆಂಗಳೂರು ಕ್ಲಬ್ ಡಿಫೆನ್ಸ್ ಟ್ಯಾಕ್ಸ್ ಕಲೆಕ್ಷನ್ ಬಗ್ಗೆ ಹೇಳಿದರು ಅದು ತಪ್ಪು ಅಲ್ಲ. ಸರ್ಕಾರಕ್ಕೆ ಬರುವ ಟ್ಯಾಕ್ಸ್ ಇದ್ದರೆ ಸರ್ಕಾರದ ಟ್ರಜರಿಯಲ್ಲಿ ಇಡಬೇಕು ಎಂದರೆ ಅದರಲ್ಲಿ ತಪ್ಪು ಇಲ್ಲ.

ಶ್ರೀ ಕೆ. ಎಂ. ನಾಗಣ್ಣ :-25 ಲಕ್ಷ ರೂಪಾಯಿ ಡಿಫೆನ್ಸ್‌ನಿಂದ ತೆಗೆದು ಕೊಂಡಿದ್ದು ನಿಜವೇ ?

ಶ್ರೀ ಎಂ. ವೈ. ಘೋರ್ಪಡೆ : ಟ್ಯಾಕ್ಸ್ ಎಂದು ತೆಗೆದುಕೊಂಡಿರುತ್ತೇವೆ

ಶ್ರೀ ಕೆ. ಎಂ. ನಾಗಣ್ಣ :—ಸಂಬಳ ಕೊಡುವುದಕ್ಕೆ ದುಡ್ಡು ಇಲ್ಲ ಎಂದು ತೆಗೆದುಕೊಂಡಿದ್ದೀರಾ ?

ಶ್ರೀ ಎಂ. ವೈ. ಘೋರ್ಪಡೆ :—ಟಾಕ್ಸ್ ಬರುವುದು ಇದ್ದರೆ ತೆಗೆದು ಕೊಳ್ಳಬಹುದು.

ಶ್ರೀ ಕೆ. ಎಂ. ನಾಗಣ್ಣ :....ಯಾವ ಸರ್ಕಾರವೂ ಇಲ್ಲಿಯ ವರೆಗೆ ತೆಗೆದು ಕೊಂಡಿಲ್ಲ. ಈ ಸರ್ಕಾರ ತನ್ನ ನೌಕರಿಗೆ ಸಂಬಳ ಕೊಡಲಿಕ್ಕೆ ಹಣವಿಲ್ಲದೆ 25 ಲಕ್ಷ ರೂಪಾಯಿಗಳನ್ನು ಡಿಫೆನ್ಸ್‌ನಿಂದ ತೆಗೆದುಕೊಂಡಿದ್ದೀರಿ.

ಶ್ರೀ ಎಂ. ವೈ. ಘೋರ್ಪಡೆ :....ಅದಕ್ಕೆ ನಾನು ಹೇಳುತ್ತಿದ್ದೇನೆ ಅದು ತಪ್ಪು ಅಲ್ಲ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಇದು ಸಣ್ಣ ವಿಷಯ ಎಂದು ಮೊದಲೇ ಹೇಳಿದೆ ಇದನ್ನು ಸಾರ್ವಜನಿಕ ಅಭಿಪ್ರಾಯಕೋಸ್ಕರ ಸರ್ಕ್ಯುಲೇಟ್ ಮಾಡಬೇಕಾದ್ದು ಇಲ್ಲ. ಗ್ಯಾಂಬ್ಲಿಂಗ್ ಇಲ್ಲಿಗಲ್ ಆಗಿ ನಡೆಯುತ್ತಿದೆ. ಅದನ್ನ ಲೀಗಲೈಸ್ ಮಾಡಿ ಸರ್ಕಾರಕ್ಕೆ ಟ್ಯಾಕ್ಸ್ ಬರುವ ರೀತಿಯಲ್ಲಿ ಮಾಡಿದ್ದೇವೆ. ಇದು ಮಾಡಬಾರದ ಕೆಲಸ ಅಲ್ಲ ಎಂದು ತಿಳಿದುಕೊಂಡಿದ್ದೇನೆ.

ಶ್ರೀ ಬಾಪೂಗೌಡ ರಾಯಪ್ಪ :....ಇಸ್ಪೀಟ್ ಆಡತಕ್ಕದ್ದು ಲೀಗಲೈಸ್ ಮಾಡಿ ವರ್ಷಕ್ಕೆ 5—6 ಸಾವಿರ ರೂಪಾಯಿ ಸರ್ಕಾರಕ್ಕೆ ಬರುತ್ತದೆ.

ಶ್ರೀ ಎಂ. ವೈ. ಘೋರ್ಪಡೆ :—ಏನು ಲೀಗಲೈಸ್ ಮಾಡುವುದಕ್ಕೆ ಸಾಧ್ಯ ವಿದೆಯೋ ಅದನ್ನು ಮಾಡೋಣ.

ಶ್ರೀ ಬಾಪೂಗೌಡ ರಾಯಪ್ಪ :.....ಬೆಂಗಳೂರಿನಲ್ಲಿ ಸುಮಾರು 400, 500 ಕ್ಲಬ್‌ಗಳು ಇವೆ. ಕ್ಲಬ್‌ಗಳಲ್ಲಿ ಇಸ್ಪೀಟ್ ಆಡುವುದರಿಂದ ಅದನ್ನು ಲೀಗಲೈಸ್ ಮಾಡಿದರೆ ಸರ್ಕಾರಕ್ಕೆ ಹಣ ಸಿಗುತ್ತದೆ.

SRI M. Y. GHORPDE: Sir, we are going away from the subject. The subject is off-course betting and as I have said it is a very small matter in the range of betting.

ಶ್ರೀ ಕೆ. ಹೆಚ್. ಹನುಮೇಗೌಡ :....ಲಕ್ಷಾಂತರ ಜನ ದುಡ್ಡು ಕಳೆದು ಕೊಂಡು ಬೀದಿ ಭಿಕಾರಿಗಳು ಆಗುತ್ತಿದ್ದಾರೆ. ಸಣ್ಣ ವಿಚಾರ ಎಂದು ಹೇಳುತ್ತೀರಿ. ಜನಗಳ ಆಸ್ತಿಪಾಸ್ತಿ, ಮಾನಮರ್ಯಾದೆ, ಹೆಣ್ಣುಮಕ್ಕಳ ರಕ್ಷಣೆ, ಇವೆಲ್ಲಾ ಸಣ್ಣ ವಿಚಾರವೇ, ಇದರಿಂದ ಬಹಳ ಜನ ಹಾಳಾಗಿ ಹೋಗಿದ್ದಾರೆ.

MR. DEPUTY SPEAKER ... The scope is very much limited.

SRI M.Y. GHORPADE.....Hon. Member Mr. Hanume Gowda might also have beat huge amounts.

ಶ್ರೀ ಕೆ. ಹೆಚ್. ಹನುಮೇಗೌಡ :....ದೇವರ ದಯೆಯಿಂದ ಅದನ್ನು ಮಾಡಿಲ್ಲ.

SRI M. Y. GHORPADE.—This is not a discussion on gambling. This is a limited subject on off-course betting. I request Hon. Member Mr. Shamanna to withdraw his motion and approve the Bill since it is not a big matter for being circulated for Public opinion.

MR. DEPUTY SPEAKER : I will put the motion of Sri T. R. Shamanna to the vote of the House.

The question is :—

"That the Mysore Betting Tax and Race Courses Licensing (Karnataka Amendment) Bill, 1974 be circulated for purpose of eliciting public opinion thereon before 30th April."

The motion was negatived

MR. DEPUTY SPEAKER : The question is

"That the Mysore Betting Tax and Race Courses Licensing (Karnataka Amendment) Bill, 1974 be taken into consideration."

The House divided

MR. DEPUTY SPEAKER : The result of the division is : Ayes-38; Noes-14. The "Ayes" have it.

The motion was adopted

ಶ್ರೀ ಕೆ. ಎಂ. ನಾಗಣ್ಣ : ಬಡ ಜನಗಳ ರಕ್ತ ಹೀರುವ ಕುದುರೆ ಜೂಜಿನ ನೀತಿಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

The Opposition members withdrew

CLAUSES 2 to 5

MR. DEPUTY. SPEAKER : The question is :—

"That Clauses 2 to 5, both inclusive, do stand part of the Bill."

The motion was adopted

Clauses 2 to 5, both inclusive, were added to the Bill.

CLAUSE 1. Etc.,

MR. DEPUTY SPEAKER: The question is :—

"That Clause 1, the long title to Preamble and the Enacting formula do stand part of the Bill."

The motion was adopted

Clause 1, the long Title the Preamble and the Enacting formula were added to the Bill.

MOTION TO PASS

SRI M. Y. GHORPADE: Sir, I move :—

"That the Mysore Betting Tax & Race Courses Licensing (Karnataka Amendment) Blll, 1974 be passed."

Mr. DEPUTY SPEAKER: The question is :—

"That the Mysore Betting Tax & Race Courses Licensing (Karnataka Amendment) Bill, 1974 be passed."

The motion was adopted and the Bill was passed

KARNATAK AND MYSORE UNIVERSITIES (AMENDMENT) BILL, 1974.

MOTION TO CONSIDER

SRI M. MALLIKARJUNASWAMY (Minister for Education): Sir, I move :—

"That the Karnataka and Mysore Universities (Amendment) Bill, 1974, be taken into consideration."